ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 31 ಆಗಸ್ಟ್ 8, 1982 ಬೆಲೆ 60 ಪೈಸೆ

ಭೀಕರ ನೆರೆಯಿಂದ ನೂರಾರು ಗ್ರಾಮಗಳು ಮುಳುಗಡೆ !
ಸಾವಿರಾರು ಮನೆಗಳ ಕುಸಿತ !!
ಉತ್ತರ ಕನ್ನಡ ಜಿಲ್ಲೆಯಲ್ಲಿ ೧೩ ಸಾವು !!!

ದಕ್ಷಿಣ–ಉತ್ತರ ಕನ್ನಡ ಜಿಲ್ಲೆಗಳಲ್ಲೂ, ಮಲೆನಾಡಿನಲ್ಲೂ ಧಾರಾಕಾರವಾಗಿ ಸುರಿದ ಮಳೆಯಿಂದ ನೇತ್ರಾವತಿ, ತುಂಗಾ, ಶರಾವತಿ ಮುಂತಾದ ನದಿಗಳೂ ಇತರ ಸಣ್ಣ ಹೊಳೆಗಳೂ ನೆರೆಯಿಂದ ತುಂಬಿ ಕುಂದಾಪುರ, ಶಿವಮೊಗ್ಗ, ಹೊನ್ನಾವರ, ಬಂಟ್ವಾಳ, ಬೈಂದೂರು, ತೀರ್ಥಹಳ್ಳಿ, ಉಡುಪಿ ಈ ಪ್ರದೇಶಗಳಲ್ಲಿ ಸಹಸ್ರಾರು ಮನೆ ಕುಸಿದು, ಅಸಂಖ್ಯಾತ ಜನರು ಭಾರಿ ಕಷ್ಟ – ನಷ್ಟಕ್ಕೆ ಒಳಗಾಗಿರುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 13 ಮಂದಿ ನೆರೆ ಪಾಲಾಗಿದ್ದಾರೆಂದು ತಿಳಿದು ಬಂದಿದೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ, ಕುಮಟಾ ಮತ್ತು ಭಟ್ಕಳದಲ್ಲಿ ಸುಮಾರು 45 ಗ್ರಾಮಗಳು ಮುಳುಗಡೆಯಾಗಿವೆ. ಸಾವಿರಾರು ಮನೆಗಳು ಕುಸಿದು, ಅಸಂಖ್ಯಾತ ಜನರು ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ.

ಕುಂದಾಪುರ ತಾಲ್ಲೂಕಿನ ಹಾಲಾಡಿಯಿಂದ ನಾವುಂಡದ ತನಕ ಸುಮಾರು 40 ಗ್ರಾಮಗಳು ನೆರೆಯಲ್ಲಿ ಮುಳುಗಿವೆ. ಸಾವಿರಕ್ಕೂ ಮಿಕ್ಕಿ ಮನೆಗಳು ಕುಸಿದಿವೆ. ಸಾವಿರಾರು ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಹಗಲಿನಲ್ಲಿಯೇ ಸಾಗಿಸಿದುದರಿಂದ ಭಾರಿ ಪ್ರಾಣ ಹಾನಿಯನ್ನು ತಪ್ಪಿಸಿದಂತಾಗಿದೆ.

ಉಡುಪಿ ತಾಲ್ಲೂಕಿನ ಕಲ್ಯಾಣಪುರ ಹಾಗೂ ಬಾರ್ಕೂರು ಹೊಳೆಗಳ ಬದಿಗಳಲ್ಲಿನ ಸುಮಾರು 200 ಮನೆಗಳು ಮುಳುಗಿವೆ.

ಬಂಟ್ವಾಳದಲ್ಲಿ ಹಲವು ಪ್ರದೇಶಗಳಲ್ಲಿ ನೂರಾರು ಮನೆಗಳು ಮುಳುಗಡೆಯಾಗಿವೆ.

ನೀರಿನ ಪ್ರವಾಹದಿಂದ ಹಲವು ರಸ್ತೆಗಳು ಕಡಿದು ಹೋಗಿ, ಮಂಗಳೂರು, ಶಿವಮೊಗ್ಗ, ಮಂಗಳೂರು-ಬೆಂಗಳೂರು

(8ನೇ ಪುಟ ನೋಡಿ)

ಜಂಟೀ ಸಮಾವೇಶದ ಕುರಿತು—

ಕಳೆದ ಜೂನ್ 11 ರಂದು ಸಿ ಪಿ ಐ (ಎಂ) ಮತ್ತು ಸಿ ಪಿ ಐ ರಾಜ್ಯ ಘಟಕಗಳು ನಡೆಸಿರುವ ರಾಜ್ಯ ಮಟ್ಟದ ಜಂಟೀ ಅಧಿವೇಶನದಲ್ಲಿ ಅಂಗೀಕರಿಸಲಾಗಿದ್ದ ಹೇಳಿಕೆಯು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜಕೀಯ ನಿಲುವಿಗೆ ವ್ಯತಿರಿಕ್ತವಾಗಿದೆ ಎಂಬುದನ್ನು ಪಕ್ಷದ ಪೊಲಿಟ್ ಬ್ಯೂರೊ ರಾಜ್ಯ ಘಟಕದ ಗಮನಕ್ಕೆ ತಂದಿರುವುದರಿಂದ ಸಮಾವೇಶದಲ್ಲಿ ಅಂಗೀಕರಿಸಲಾದ ಹೇಳಿಕೆಯೊಂದಿಗೆ ತನಗಿರುವ ಸಂಬಂಧವನ್ನು ಸಿ ಪಿ ಐ (ಎಂ) ರಾಜ್ಯ ಘಟಕವು ಕಡಿದುಕೊಂಡಿದೆ. ಆದರೆ ಇದೇ ಸಂದರ್ಭದಲ್ಲಿ ಜನತೆಯನ್ನು ಬಾಧಿಸುತ್ತಿರುವ

ಸಂಪಾದಕೀಯ

ಸಮಸ್ಯೆಗಳ ಪರಿಹಾರಕ್ಕಾಗಿ ಸಂಯುಕ್ತ ಕಾರ್ಯಾಚರಣೆಗಳನ್ನು ನಡೆಸುವುದಕ್ಕೆ ಸಿ ಪಿ ಐ (ಎಂ) ಸಿದ್ಧವಿದೆ. ಜಂಟೀ ಸಮಾವೇಶನದಲ್ಲಿ ಅಂಗೀಕರಿಸಲಾದ ಹೇಳಿಕೆಯಿಂದ ಪ್ರತ್ಯೇಕಿಸಿಕೊಳ್ಳುತ್ತಿದ್ದರೂ, ಜಂಟೀ ಹೋರಾಟಗಳನ್ನು ನಡೆಸಲು ಸಿದ್ಧ ಎಂಬುದಾಗಿ ಸಿ. ಪಿ. ಐ. (ಎಂ.) ರಾಜ್ಯ ಸೆಕ್ರೆಟರಿಯೇಟ್ ಸಿ. ಪಿ. ಐ. ರಾಜ್ಯ ಘಟಕಕ್ಕೆ ತಿಳಿಸಿದೆ.

ಪಕ್ಷದ ಪೊಲಿಟ್ ಬ್ಯೂರೊವು ತೆಗೆದುಕೊಂಡಿರುವ ನಿರ್ಣಯದ ಬಗ್ಗೆ ಸಿ. ಪಿ. ಐ. (ಎಂ) ರಾಜ್ಯ ಸಮಿತಿಗೆ ಸಂಪೂರ್ಣ ಒಪ್ಪಿಗೆ ಇದೆ. ಜಂಟೀ ಸಮಾವೇಶದಲ್ಲಿ ಅಂಗೀಕರಿಸಲಾಗಿರುವ ಹೇಳಿಕೆಯು ಪಕ್ಷದ ಧೋರಣೆಗಳಿಗೆ ವಿರುದ್ಧವಾಗಿದೆ ಎಂದು ತೋರಿಸಿಕೊಡುವುದರೊಂದಿಗೆ, ಎರಡೂ ಪಕ್ಷಗಳು ಸಂಯುಕ್ತ ಕಾರ್ಯಾಚರಣೆ ನಡೆಸಬೇಕೆಂಬ ಆಶಯ ಸರಿಯಾಗಿದೆ ಎಂದೂ ಪೊಲಿಟ್ ಬ್ಯೂರೊ ಹೇಳಿದೆ. ರಾಜಕೀಯವಾಗಿ ಪಕ್ಷದ ನಿಲುವಿಗೆ ವ್ಯತಿರಿಕ್ತವಾಗಿದೆ ಎನ್ನುವದು ಅದು ಹೇಗೆ ಎಂಬುದನ್ನು ಗಮನಿಸಬೇಕು.

ಜಂಟೀ ಅಧಿವೇಶನದಲ್ಲಿ ಅಂಗೀಕರಿಸಲಾದ ಹೇಳಿಕೆಯಲ್ಲಿ ಅಂತರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ಮಾತನಾಡುವಾಗ ಚೀನವನ್ನು ಟೀಕಿಸಲಾಗಿದೆ. ಸಿ. ಪಿ. ಐ. (ಎಂ.)ನ ವಿಜಯವಾಡ ಅಧಿವೇಶನದಲ್ಲಿ ಅಂಗೀಕರಿಲಾಗಿರುವ ರಾಜಕೀಯ ಗೊತ್ತುವಳಿಯಲ್ಲಿ ಚೀನಾವನ್ನು ಕಟುವಾಗಿ ಟೀಕಿಸಿದೆ. ಅಲ್ಲದೇ ಎಲ್ಲ ಸಮಾಜವಾದಿ ದೇಶಗಳೂ, ಅಂದರೆ ಸೋವಿಯತ್ ರಷಿಯಾವೂ ಸೇರಿದಂತೆ, ಅನುಸರಿಸುತ್ತಿರುವ ಕೆಲವು ಧೋರಣೆಗಳನ್ನೂ ಕಟುವಾಗಿ ಟೀಕಿಸಿದೆ. ಆದುದರಿಂದ ಚೀನಾದ ಬಗ್ಗೆ ಟೀಕಿಸಿರುವಷ್ಟನ್ನೆ ಪ್ರತ್ಯೇಕವಾಗಿ ಹೆಕ್ಕಿ ತೆಗೆದುಕೊಂಡರೆ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಬಗೆಗೆ ಸಿ. ಪಿ. ಐ. (ಎಂ)ಗೆ ಇರುವ ಧೋರಣೆಯ ಬಗ್ಗೆ ತಪ್ಪು ಅಭಿಪ್ರಾಯ ಉಂಟಾಗುತ್ತದೆ. ಎರಡೂ ಪಕ್ಷಗಳಿಗೆ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಬಗ್ಗೆ ಮೂಲತವಾದ ಭಿನ್ನಾಭಿಪ್ರಾಯಗಳಿದ್ದರೂ, ಅದನ್ನು ಮರೆಮಾಚಿದಂತಾಗುತ್ತದೆ.

(8ನೇ ಪುಟನೋಡಿ)

ಆರು ರಾಜಕೀಯ ಪಕ್ಷಗಳ ಜಂಟೀ ಕರೆ

ಅಕ್ಟೋಬರ್ ೪ ರಂದು ಯುದ್ಧ ವಿರೋಧಿ ಶಾಂತಿ ಯಾತ್ರೆ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಸಿ.ಪಿ.ಐ., ಪೀಸಂಟ್ಸ್ ಅ್ಯಂಡ್ ವರ್ಕರ್ಸ್ ಪಾರ್ಟಿ (PWP), ಡೆಮೊಕ್ರೆಟಿಕ್ ಸೋಷಯಲಿಸ್ಟ್ ಪಕ್ಷ, ಆರ್. ಎಸ್.ಪಿ. ಮತ್ತು ಪಾರ್ವರ್ಡ್ ಬ್ಲಾಕ್ ಈ ಪಕ್ಷಗಳು ಜಂಟಿಯಾಗಿ ದೇಶದಾದ್ಯಂತ ಶಾಂತಿ ಚಳವಳಿಯನ್ನು ಸಂಘಟಿಸಲು ತೀರ್ಮಾನಿಸಿವೆ. ಇದರ ಅಂಗವಾಗಿ ಅಕ್ಟೋಬರ್ 4 ರಂದು ದೆಹಲಿಯಲ್ಲಿ ಬೃಹತ್ ರ್‍ಯಾಲಿಯೊಂದನ್ನು ನಡೆಸಲು ತೀರ್ಮಾನಿಸಿವೆ.

ಈ ಕುರಿತು ಆರು ಪಕ್ಷಗಳ ಪ್ರತಿನಿಧಿಗಳು ಜುಲೈ 20 ರಂದು ದೆಹಲಿಯಿಂದ ಒಂದು ಜಂಟೀ ಹೇಳಿಕೆ ಹೊರಡಿಸಿದ್ದು, ಹೇಳಿಕೆಗೆ ಕಾಂ! ಇ.ಎಂ.ಎಸ್.ನಂಬೂದ್ರಿಪಾಡ್, [ಸಿ.ಪಿ.ಐ. (ಎಂ)], ಸಿ. ರಾಜೇಶ್ವರರಾವ್ (ಸಿ.ಪಿ.ಐ.), ಕೃಷ್ಣರಾವ್ ಧುಲಪ್ (ಪಿ.ಡಬ್ಲ್ಯೂ.ಪಿ.), ಎಚ್. ಎನ್. ಬಹುಗುಣ (ಡಿ.ಎಸ್.ಪಿ), ತ್ರಿದಿಬ್ ಚೌದರಿ (ಆರ್.ಎಸ್.ಪಿ.) ಮತ್ತು ಚಿತ್ತಬಸು (ಫಾರ್ವರ್ಡ್ ಬ್ಲಾಕ್) ಇವರುಗಳು ಸಹಿ ಹಾಕಿದ್ದಾರೆ.

ಜಂಟೀ ಹೇಳಿಕೆ ಇಂತಿದೆ :

ಜಗತ್ತನ್ನು ಅಣುಯುದ್ಧದ ವಿನಾಶಕ್ಕೆ ದೂಡಲು ಸಾಮ್ರಾಜ್ಯವಾದಿಗಳೂ ಅವರ ಮಿತ್ರರೂ ಇಂದು ಯತ್ನಿಸುತ್ತಿದ್ದಾರೆ. ಇಂದು ಇರುವಷ್ಟು ಯುದ್ಧದ ಸಂಭವತೆ ಹಿಂದೆಂದೂ ಇರಲಿಲ್ಲ. ಸಾಮ್ರಾಜ್ಯವಾದಿ ಯುದ್ಧಕೋರರು ಜಗತ್ತಿನ ಎಲ್ಲೆಡೆಗಳಲ್ಲೂ ಇಂದು ಸಕ್ರಿಯವಾಗಿರುವಷ್ಟು ಹಿಂದೆಂದೂ ಇರಲಿಲ್ಲ. ಅವರಿಂದು ಎಲ್ಲೆಲ್ಲೂ ಯುದ್ಧದ ಕಾವುನೆಲೆಗಳನ್ನು ಸೃಷ್ಟಿಸುತ್ತಿದ್ದಾರೆ.

ತಂತಮ್ಮ ಪ್ರದೇಶಗಳಲ್ಲಿ ಪರ್ಶಿಂಗ್ ಕ್ಷಿಪಣಿಗಳನ್ನು ಹರಡಬೇಕೆಂದು ಪಶ್ಚಿಮ ಯುರೋಪಿನ ರಾಷ್ಟ್ರಗಳನ್ನು ಅಮೇರಿಕ ನಿರ್ಬಂಧಿಸುತ್ತಿದೆ; ತನ್ಮೂಲಕ ಸಮಾಜವಾದೀ ದೇಶಗಳ, ಹೆಚ್ಚೇಕೆ ತನ್ನ ನ್ಯಾಟೋ ಮಿತ್ರರಾಷ್ಟ್ರಗಳ ಭದ್ರತೆಗೂ ಅದು ಅಪಾಯವನ್ನು ತಂದೊಡ್ಡುತ್ತಿದೆ. ಅಣುಘರ್ಷಣೆಯ ಕೇಂದ್ರವನ್ನಾಗಿ ಬಾಹ್ಯಾಂತರಿಕ್ಷವನ್ನು ಅದು ಪರಿವರ್ತಿಸುತ್ತಿದೆ. ಮೊದಲಾಗಿ ಅಣುಅಸ್ತ್ರಗಳ ಹೊಡೆತ ನೀಡುವ ಮೂಲಕ ಸೋವಿಯೆತ್ ಯೂನಿಯನ್ ಮತ್ತಿತರ ಸಮಾಜವಾದಿ ರಾಷ್ಟ್ರಗಳ ನಿರ್ನಾಮ ಮಾಡಲು ಕೂಡಾ ಅದು ಯತ್ನಿಸುತ್ತಿದೆ. ನ್ಯೂಟ್ರಾನ್ ಬಾಂಬುಗಳ ಮೂಲಕ 'ಪರಿಮಿತ ಅಣುಯುದ್ಧ' ಎಂಬ ಅದರಮಾತು ಜನರನ್ನು ಸಮಜಾಯಿಸುವ ಶುದ್ಧ ಆತ್ಮವಂಚನೆ ಹೊಂತು ಬೇರೇನಲ್ಲ. ದುರದೃಷ್ಟವಶಾತ್ ಅಣು ಅಸ್ತ್ರಗಳ ಘರ್ಷಣೆಯುಂಟಾದುದೇ ಆದರೆ ಅದೆಂದೂ ಪರಿಮಿತವಾಗಿ ಉಳಿಯಲಾರದು; ಸಮಸ್ತ ಜಗತ್ತನ್ನೇ ಆವರಿಸಿಕೊಂಡೀತು; ಎಣಿಸಲಾರದಷ್ಟು ಜನರ ಜೀವಸೊತ್ತುಗಳ ನಾಶಕ್ಕೆ ಅದು ಕಾರಣವಾದೀತು; ಮಾನವ ಕುಲದ ಭವಿಷ್ಯವನ್ನೇ ವಿಪತ್ತಿಗೆ ಗುರಿಪಡಿಸೀತು.

ಯುದ್ಧ ಪಿಪಾಸು ಅಮೇರಿಕಾ

ಇಡಿಯ ಜಗತ್ತಿನಲ್ಲೇ ಸರ್ವಾಧಿಕಾರವನ್ನು ಹೇರುವ ತಮ್ಮ ಕುಯುಕ್ತಿಯನ್ನು ಅಡಗಿಸಿಡಲು ತನ್ನ ಭದ್ರತೆಗೆ ಸೋವಿಯೆತ್ ಯೂನಿಯನ್ನಿನಿಂದ ಅಪಾಯವಿದೆ, ಅದನ್ನಿದಿರಿಸಲು ಈ ಯತ್ನ ಎಂಬ ನೆಪವನ್ನು ಅಮೇರಿಕಾ ಮುಂದಿಡುತ್ತಿದೆ. ಹಿಂದೂಮಹಾಸಾಗರದಲ್ಲೂ ಪರ್ಶಿಯ ಖಾರಿಯಲ್ಲೂ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸಬೇಕೆಂದು ಅದು ತನ್ನ ನ್ಯಾಟೋ ಮಿತ್ರರನ್ನು ಒತ್ತಾಯಿಸುತ್ತಿದೆ. ಪ. ಏಷ್ಯಾದಲ್ಲಿ ಹಸ್ತಕ್ಷೇಪ ಮಾಡಲು ಕ್ಷಿಪ್ರ ಕಾರ್ಯಾಚರಣೆಯ ಪಡೆಯನ್ನು ಅದು ಸಜ್ಜುಗೊಳಿಸಿದೆ. ಡಿಯೋಗೋ ಗಾರ್ಶಿಯವನ್ನು ವಿಮಾನ ಮತ್ತು ನೌಕಾ ನೆಲೆಯನ್ನಾಗಿ ಪರಿವರ್ತಿಸಿ ಅದನ್ನದು ಆಧುನೀಕರಿಸಿದೆ.

(8ನೇ ಪುಟ ನೋಡಿ)

ಜುಲೈ ೨೩ ರಿಂದ ೨೫ರ ವರೆಗೆ ಬೆಂಗಳೂರಿನಲ್ಲಿ ನಡೆದ ಸಿಐಟಿಯು ಕಾರ್ಯಕಾರಿ ಸಮಿತಿ ಅಂಗೀಕರಿಸಿದ ನಿರ್ಣಯಗಳ ಸಾರಾಂಶ

ಬರಗಾಲ ಪರಿಸ್ಥಿತಿ

ದೇಶದ ಹಲವಾರು ಪ್ರದೇಶಗಳಲ್ಲಿ ಮುಖ್ಯವಾಗಿ ಉತ್ತರ ಭಾರತದಲ್ಲಿ ತೀವ್ರ ಬರಗಾಲ ಬಂದಿದೆ. ಕುಡಿಯಲು ನೀರು ಕೂಡ ಸಿಗುತ್ತಿಲ್ಲ. ಮಳೆಯ ಅಭಾವದಿಂದಾಗಿ ಬಿತ್ತಿದ ಬೀಜದ ಮೊಳಕೆಗಳೂ ಒಣಗುತ್ತಿವೆಂಬ ವರದಿ ಬರುತ್ತಿದೆ. ಇದರಿಂದ ಭೀಕರ ಬರಗಾಲ ಆವರಿಸುವ ಸಂಭವವಿದೆ. ಇಂಥ ಪರಿಸ್ಥಿತಿಯಲ್ಲಿ ಸರಕಾರ ತೀವ್ರ ಕ್ರಮ ಕೈಗೊಳ್ಳದಿದ್ದರೆ ಜನರು ಅಪಾರ ಕಷ್ಟಗಳನ್ನೆದುರಿಸಬೇಕಾಗಬಹುದು.

ಹಳ್ಳಿ ಪ್ರದೇಶದ ಜನರಿಗೆ ಹೊಸ ಬೀಜ ಒದಗಿಸಬೇಕೆಂದೂ, ಸರಿಯಾದ ಪರಿಹಾರ ಕೊಡಬೇಕೆಂದು ಈ ಸಭೆ ಕೇಂದ್ರ ಸರಕಾರವನ್ನು ಒತ್ತಾಯಪಡಿಸುತ್ತದೆ. ಮಳೆಯ ಅಭಾವ ಉಂಟಾದಾಗ, ಬರಗಾಲ ಪರಿಸ್ಥಿತಿಯನ್ನು ತಡೆಗಟ್ಟಲು ಇನ್ನು ಮುಂದೆ ಕೇಂದ್ರ ಸರಕಾರ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು ಅತ್ಯಗತ್ಯ.

ಸಂಕಷ್ಟಕ್ಕೆ ತುತ್ತಾಗಿರುವ ರೈತರಿಗೆ ಬೆಂಬಲಕೊಡಲು ಮತ್ತು ಕೇಂದ್ರ ಸರಕಾರದಿಂದ ಪರಿಹಾರ ಪಡೆಯಲು ಸಂಯುಕ್ತ ಹೋರಾಟ ನಡೆಸುವುದಕ್ಕೆ ಕಾರ್ಮಿಕವರ್ಗಮುಂದಾಗಬೇಕೆಂದು ಈ ಸಭೆ ವಿನಂತಿಸುತ್ತದೆ.

ಹರಿಜನರ ಮೇಲೆ ಅತ್ಯಾಚಾರ

ಬಿಹಾರ, ಉತ್ತರ ಪ್ರದೇಶ ಮತ್ತಿನ್ನಿತರ ರಾಜ್ಯಗಳಲ್ಲಿ ಹಂಜನ, ಗಿರಿಜನರ ಮೇಲೆ ಸತತವಾಗಿ ನಡೆಯುತ್ತಿರುವ ದಬ್ಬಾಳಿಕೆಯನ್ನು ಕಾರ್ಯಕಾರಿ ಸಮಿತಿ ಗಂಭೀರವಾಗಿ ಪರಿಗಣಿಸುತ್ತದೆ. ಮನೆಗಳನ್ನು ಸುಡುವ, ಕೊಲೆ ಮಾಡುವ, ಹೆಣ್ಣು ಮಕ್ಕಳ ಮಾನಭಂಗಮಾಡುವಂಥ ರೀತಿಯಲ್ಲಿ ಅತ್ಯಾಚಾರ ನಡೆದಿವೆ. ಇದರಲ್ಲಿ ಮಕ್ಕಳೂ ಬಲಿಯಾಗಿದ್ದಾರೆ.

ಈ ಅತ್ಯಾಚಾರಗಳು ಬರೇ ಜಾತಿ ಸಮಸ್ಯೆಗಳಿಗಷ್ಟೇ ಸೀಮಿತವಾಗದೆ, ಮುಖ್ಯವಾಗಿ ಇದು ಆರ್ಥಿಕ ಮತ್ತು ವರ್ಗ ಸಂಬಂಧವನ್ನು ಹೊಂದಿಕೊಂಡಿದೆಂದು ಕಾರ್ಯಕಾರೀ ಸಮಿತಿ ಸ್ಪಷ್ಟ ಅಭಿಪ್ರಾಯ ವ್ಯಕ್ತಮಾಡುತ್ತದೆ. ಹಳ್ಳಿಗಾಡು ಜನರ ಮೇಲೆ ಅತ್ಯಾಚಾರ ಮಾಡುವವರೆಲ್ಲ ಮೇಲ್ವರ್ಗ ಜಾತಿಯವರಷ್ಟೇ ಅಲ್ಲ, ಸುಲಿಯುವ ವರ್ಗಕ್ಕೂ ಸೇರಿದವರಿದ್ದಾರೆ. ಭೂಮಿ ಮತ್ತು ಹೆಚ್ಚಿನ ವೇತನಕ್ಕಾಗಿ ನಡೆಯುತ್ತಿರುವ ಹೋರಾಟಕ್ಕೆ ಈ ಅತ್ಯಾಚಾರವನ್ನು ಹೊಂದಿಸಲಾಗುತ್ತಿದೆ. ತನ್ನ ಬೆವರು ಮತ್ತು ಶ್ರಮದಿಂದ ಸಾಗುಮಾಡುವ ಭೂಮಿಯ ಹಕ್ಕು, ಹೆಚ್ಚಿನ ವೇತನ ಜೀವನ ಪರಿಸ್ಥಿತಿಯ ಸುಧಾರಣೆಗಾಗಿ ನಡೆಯುತ್ತಿರುವ ವರ್ಗ ಹೋರಾಟಗಳು ಬೆಳೆಯುತ್ತಿದ್ದಂತೆ ಅದನ್ನು ಹತ್ತಿಕ್ಕಲು ಮೇಲಿನ ವರ್ಗ ಪ್ರಯತ್ನಿಸುತ್ತಿದೆ.

ಅಸ್ಪೃಶ್ಯತಾ ನಿವಾರಣೆಗಾಗಿರುವ ಕಾನೂನುಗಳಿದ್ದರೂ ಮತ್ತು ಕೇಂದ್ರ–ರಾಜ್ಯ ಸರಕಾರಗಳು ಮೊಸಳೆ ಕಣ್ಣೀರು ಸುರಿಸುತ್ತಿದ್ದರೂ, ಈ ರೀತಿ ಒಂದೇ ಸಮನೆ ನಡೆಯುತ್ತಿರುವ ದಬ್ಬಾಳಿಕೆಯನ್ನು ಈ ಸಭೆ ಬಲವಾಗಿ ಖಂಡಿಸುತ್ತದೆ.

ಭೂ ಸುಧಾರಣೆಯನ್ನು ಪರಿಣಾಮಕಾರಿಯಾಗಿ ಮಾಡಬೇಕೆಂದೂ, ಭೂಹೀನರಿಗೆ ಭೂಮಿ ಹಂಚಬೇಕೆಂದೂ, ಕಾಯಿದೆಗೆ ವಿರುದ್ಧವಾಗಿ ಭೂಮಾಲಿಕ ವರ್ಗ ತನ್ನ ಹಿಡಿತದಲ್ಲಿಟ್ಟುಕೊಂಡಿರುವ ಹೆಚ್ಚುವರಿ ಭೂಮಿಯನ್ನು ಬಡಜನರಿಗೆ ಹಂಚಬೇಕೆಂದೂ, ಸರಕಾರ ಹಳ್ಳಿಯ ಬಡವರಿಗೆ ಸಂರಕ್ಷಣೆ ನೀಡಬೇಕೆಂದೂ ಈ ಸಭೆ ಒತ್ತಾಯಪಡಿಸುತ್ತದೆ. ಹರಿಜನ, ಗಿರಿಜನರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯ ವಿರುದ್ಧ ಕಾರ್ಮಿಕ ವರ್ಗ ಮತ್ತು ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳು ಪ್ರತಿಭಟಿಸಿ ಇವರ ಪರವಾಗಿ ಬಲಿಷ್ಟವಾದ ಪ್ರಚಾರ —ಪ್ರಕ್ಷೋಭೆ ನಡೆಸಬೇಕೆಂದೂ ಈ ಸಭೆ ಕರೆಕೊಡುತ್ತದೆ.

ಮಹಿಳೆಯರ ಮೇಲೆ ಅತ್ಯಾಚಾರ

ದೇಶದಲ್ಲಿ ವರದಕ್ಷಿಣೆಗಾಗಿ ಮರಣ, ಮಹಿಳೆಯರ ಮಾನಭಂಗ, ಅತ್ಯಾಚಾರಗಳು ಅತಿರೇಕವಾಗಿ ನಡೆಯುತ್ತಿರುವುದನ್ನು ಈ ಸಭೆ ಬಹಳ ವಿಷಾದದಿಂದ ಪರಿಗಣಿಸುತ್ತದೆ. ಸಮಾಜ ದ್ರೋಹಿಗಳಿಗೆಲ್ಲ ಪೋಲೀಸರು ಇಂಥ ಹೀನ ಕೃತ್ಯಗಳಿಗೆ ಬೆಂಬಲಿಸುತ್ತಿರುವುದು ಖಂಡನೀಯ.

ವರದಕ್ಷಿಣೆಗಾಗಿ ನಡೆಯುತ್ತಿರುವ ದುರ್ಮರಣ ಮತ್ತು ಅದರ ಕ್ರೂರತೆಯನ್ನು ನೋಡುವಾಗ ಹಣದಾಸೆಗಾಗಿ ಜನ ಎಂಥ ಹೀನ ಕೃತ್ಯಕ್ಕೂ ಹೆದರುವುದಿಲ್ಲೆಂಬುದನ್ನು ತೋರಿಸಿಕೊಡುತ್ತದೆ. ಎರಡು ಮಕ್ಕಳ ತಾಯಿಯನ್ನೂ ವರದಕ್ಷಿಣೆಗಾಗಿ ಕೊಲ್ಲುವುದನ್ನು ನೋಡುವಾಗ ಸಮಾಜ ಎಷ್ಟು ಅಧೋಗತಿಗಿಳಿದಿದೆಂಬುದು ಸ್ಪಷ್ಟವಾಗುತ್ತದೆ.

ಮಹಿಳೆಯರ ಮರ್ಯಾದೆ ಉಳಿಸಲು ಅಸಮರ್ಥವಾದ ಕಾಂಗ್ರೆ ಸರಕಾರವನ್ನು ಈ ಸಭೆ ಬಲವಾಗಿ ಖಂಡಿಸುತ್ತದೆ. ನಮ್ಮ ಸಂವಿಧಾನದ ಮಾರ್ಗದರ್ಶಕ ಸೂಚನೆಗಳಲ್ಲಿ ಮಹಿಳೆಯರಿಗೆ ಸಂಪೂರ್ಣ ರಕ್ಷಣೆ ನೀಡಲಾಗುವುದೆಂದು ಹೇಳಿದ್ದರೂ ಕೂಡ, ಒಬ್ಬ ಮಹಿಳೆಯೇ ಪ್ರಧಾನ ಮಂತ್ರಿಯಾಗಿರುವಾಗ ಈ ತತ್ವಗಳೆಲ್ಲ ಬರೇ ಕಾಗದದಲ್ಲೇ ಉಳಿದಿರುವುದು ವಿಷಾದಕರ.

ಇಂಥ ಅತ್ಯಾಚಾರಗಳ ವಿರುದ್ಧ ಪ್ರತಿಭಾವನೆ ವ್ಯಕ್ತಪಡಿಸಲು ದೇಶದ ಮಹಿಳಾ ಸಂಘಟನೆಗಳು ಆಗಸ್ಟ್ 3 ರಂದು "ಪಾರ್ಲಿಮೆಂಟ್ ಚಲೋ" ಕಾರ್ಯಕ್ರಮ ನಿರ್ಧರಿಸಿದ್ದು, ಈ ಸಭೆ ಅದಕ್ಕೆ ಸಂಪೂರ್ಣ ಬೆಂಬಲ ನೀಡುತ್ತದೆ.

ಕಾರ್ಮಿಕರ ಕರಾಳ ಕಾಯಿದೆ

ನಾಲ್ಕು ವರ್ಷಗಳ ಹಿಂದೆ ಜನತಾ ಸರಕಾರ ಕಾರ್ಮಿಕ ವಿರೋಧಿ ಕಾಯಿದೆಯನ್ನು ಲೋಕಸಭೆಯಲ್ಲಿ ಮಂಡಿಸಲು ಪ್ರಯತ್ನ ಮಾಡಿದಾಗ, ಕಾಂಗ್ರೆಯು ಕಾರ್ಮಿಕ ಸಂಘಟನೆಗಳನ್ನೊಳಗೊಂಡು ಎಲ್ಲ ಕಾರ್ಮಿಕ ಸಂಘಗಳೂ ಅದನ್ನು ವಿರೋಧಿಸಿದಾಗ ಸರಕಾರ ಕೈಬಿಟ್ಟಿದ್ದರೂ ಕೂಡ, ಇಂದಿರಾ ಸರಕಾರ ಮತ್ತೆ ಕೈಗಾರಿಕಾ ವಿವಾದಗಳಿಗೆ ಸಂಬಂಧಪಟ್ಟ ಕಾಯಿದೆಗಳಿಗೆ ತಿದ್ದುಪಡಿ ಮಂಡಿಸಿರುವುದನ್ನೂ, ಆಸ್ಪತ್ರೆ, ಶಾಲೆಗಳಲ್ಲಿ ದುಡಿಯುವ ನೌಕರದಾರರನ್ನೆಲ್ಲ ಕೈಗಾರಿಕಾ ವಿವಾದ ಕಾನೂನುಗಳಿಂದ ಬೇರ್ಪಡಿಸಿರುವುದನ್ನು ಈ ಸಭೆ ಖಂಡಿಸುತ್ತದೆ.

ಈ ತಿದ್ದುಪಡಿಗಳು ಲೋಕಸಭೆಯಲ್ಲಿ ಮಂಜೂರು ಮಾಡಲ್ಪಟ್ಟರೆ ಕಾರ್ಮಿಕರ ಹೋರಾಟದ ಹಕ್ಕನ್ನೇ ನಿರ್ವೀರ್ಯಗೊಳಿಸುತ್ತದೆ. ಮುಷ್ಕರ ಹೂಡುವ ಹಕ್ಕೇ ಇಲ್ಲದಂತಾಗುತ್ತದೆ. ಇವುಗಳಿಂದ ಕಾರ್ಮಿಕ ಸಂಘಟನೆಗೆ, ಸಾಮೂಹಿಕ ಚೌಕಾಶಿಗೆ ಅಡ್ಡಿಯಾಗುತ್ತದೆ.

ಜನರನ್ನು ಸುಲಿದು ಹೆಚ್ಚು ಲಾಭಗಳಿಸುವಂತೆ ಗುತ್ತೇದಾರಿ ಬಂಡವಾಳದಾರರಿಗೆ ಕೇಂದ್ರ ಸರಕಾರ ಹೆಚ್ಚಿನ ಅನುಕೂಲ ಮಾಡಿಕೊಡುತ್ತಿರುವಾಗಲೇ ಇಂಥ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ತರುತ್ತಿರುವುದು ಅತಿ ಮಹತ್ವದ್ದಾಗಿದೆ. ನಮ್ಮ ದೇಶ ಆರ್ಥಿಕ ಬಿಕ್ಕಟ್ಟನ್ನೆದುರಿಸುತ್ತಿರುವಾಗ, ಹಾಗೆಯೇ ಈ ಬಿಕ್ಕಟ್ಟಿನಿಂದ ಹೊರಗೆ ಬರುವುದರ ಸಲುವಾಗಿ ಕೇಂದ್ರ ಸರಕಾರ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗೆ ಮತ್ತು ವಿಶ್ವ ಬ್ಯಾಂಕಿಗೆ ಸಂಪೂರ್ಣ ಶರಣಾಗತರಾಗುತ್ತಿರುವಾಗ ಇಂಥ ತಿದ್ದುಪಡಿಗಳನ್ನು ತರುತ್ತಿದ್ದಾರೆ.

ಹೋದ ವರ್ಷ ನವೆಂಬರ್ 23 ರಂದು ಲೋಕಸಭೆಯ ಮುಂದೆ ಪ್ರತಿಭಟನೆ. ಹಾಗೆಯೇ ಈ ವರ್ಷ ಜನವರಿ 19 ರಂದು ದೇಶದಾದ್ಯಂತ ಸಾರ್ವತ್ರಿಕ ಮುಷ್ಕರ, ಈ ಕರಾಳ ಕಾಯಿದೆಗಳ ವಿರುದ್ಧ ನಡೆದರೂ ಕೂಡ ಸರಕಾರ ಈ ಈ ತಿದ್ದುಪಡಿಗಳನ್ನು ಪಾಸುಮಾಡಲು ಆತುರವಾಗಿರುವುದನ್ನು ನೋಡಿದರೆ, ವಿಶ್ವ ಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಯ ಪ್ರಭಾವ ಸರಕಾರದ ಮೇಲೆ ಎಷ್ಟು ಬಿದ್ದಿದೆಂಬುದು ಸ್ಪಷ್ಟವಾಗುತ್ತದೆ.

ಕಾರ್ಮಿಕ ವರ್ಗ ರಾಷ್ಟ್ರೀಯ ಚಳವಳಿ ಸಮಿತಿಯ ನೇತೃತ್ವದಲ್ಲಿ ತನ್ನ ಸಂಘಟನೆಯನ್ನು ಬಲಗೊಳಿಸಿ, ಸಂಯುಕ್ತ ಹೋರಾಟ ನಡೆಸಿ, ಸರಕಾರ ತನ್ನ ಕಾರ್ಮಿಕ ವಿರೋಧಿ ಕ್ರಮವನ್ನು ಬಿಟ್ಟುಕೊಡುವಂತೆ ಮಾಡಬೇಕು.

ಸರ್ವಾಧಿಕಾರಿ ದೃಷ್ಟಿಕೋಣ ಎಷ್ಟು ಬೆಳೆಯುತ್ತಿದೆಂಬುದನ್ನು ಈ ತಿದ್ದುಪಡಿಗಳು ತೋರಿಸಿಕೊಡುತ್ತಿವೆ. ಹಾಗೆಯೇ ಆರ್ಥಿಕ ಬಿಕ್ಕಟ್ಟಿನ ಹೊರೆಯನ್ನು ಸಾರ್ವಜನಿಕರ ಮೇಲೆ ಹೇರಿ, ಲಾಭವನ್ನು ಗುತ್ತೇದಾರಿಗಳಿಗೆ ಕೊಡಿಸುವ ನೀತಿಯಾಗಿದೆ. ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಇದರ ವಿರುದ್ಧ ಹೋರಾಡಲು ತಯಾರಿ ಮಾಡಬೇಕೆಂದು ಈ ಸಭೆ ಕರೆ ಕೊಡುತ್ತದೆ.

ಬೆಳೆಯುತ್ತಿರುವ ಯುದ್ಧದ ಭೀತಿ- ಶಾಂತಿಗಾಗಿ ಹೋರಾಟ

ಇಡೀ ಜಗತ್ತನ್ನೇ ವಶಪಡಿಸಿಕೊಳ್ಳುವ ದುರುದ್ದೇಶದಿಂದ ಅಮೇರಿಕದ ಸಾಮ್ರಾಜ್ಯಶಾಹಿಗಳು ಅಣುಯುದ್ಧದ ತಯಾರಿ ನಡೆಸುತ್ತಿದ್ದು, ಮಾನವ ಜನಾಂಗಕ್ಕೆ ಭೀತಿಯನ್ನುಂಟುಮಾಡುತ್ತಿರುವುದನ್ನು ಸಿ.ಐ.ಟಿ.ಯು. ಖಂಡಿಸುತ್ತದೆ. ಸಮತಾವಾದಿ ರಷ್ಯ ದೇಶದ ವಿರುದ್ಧ ಈ ತಯಾರಿ ನಡೆದಿದೆಂಬುದು ಸ್ಪಷ್ಟ. ಅಣ್ವಸ್ತ್ರಗಳನ್ನು ಪ್ರತಿಬಂಧಿಸುವ ಸಲುವಾಗಿ ಸೋವಿಯತ್ ರಷ್ಯ ನಡೆಸುತ್ತಿರುವ ಪ್ರಯತ್ನಗಳನ್ನೆಲ್ಲ ಅಮೇರಿಕ ಕೆಡಿಸುತ್ತಿದೆ.

ಅಮೇರಿಕದ ಈ ಯುದ್ಧ ನೀತಿಯ ವಿರುದ್ಧ ಬಂಡವಾಳಶಾಹಿ ರಾಷ್ಟ್ರಗಳ ಕಾರ್ಮಿಕ ವರ್ಗ ಮತಪ್ರದರ್ಶನ ನಡೆಸುತ್ತಿರುವುದು ಸ್ವಾಗತಾರ್ಹ ವಿದ್ಯಾರ್ಥಿಗಳೂ, ಯುವಕರೂ, ಮಹಿಳೆಯರೆಲ್ಲರೂ ಇದರಲ್ಲಿ ಭಾಗವಹಿಸುತ್ತಿದ್ದಾರೆ. ಸ್ವತಃ ಅಮೇರಿಕದಲ್ಲಿಯೂ ಪ್ರಭಾವಿತವಾದ ಮತಪ್ರದರ್ಶನಗಳು ನಡೆಯುತ್ತಿರುವುದು ರೇಗನ್ ಸರಕಾರದ ಯುದ್ಧ ನೀತಿ ಎಷ್ಟು ಜನವಿರೋಧಿಯಾಗುತ್ತಿದೆಂಬುದನ್ನು ತೋರಿಸುತ್ತದೆ.

ತಟಸ್ಥ ರಾಷ್ಟ್ರಗಳು ಶಾಂತಿಗಾಗಿ ನಡೆಸುತ್ತಿರುವ ಪ್ರಯತ್ನವನ್ನು ಸ್ವಾಗತಿಸುತ್ತಾ, ಭಾರತ ಸರಕಾರ ತನ್ನ ಚಂಚಲತೆಯನ್ನು ಬಿಟ್ಟುಕೊಟ್ಟು, ಶಾಂತಿ ಹಾಗೂ ನಿಶ್ಶಸ್ತ್ರೀಕರಣಕ್ಕಾಗಿ ತನ್ನ ಸರ್ವಶಕ್ತಿಯನ್ನುಪಯೋಗಿಸಬೇಕೆಂದು ಕೇಳಿಕೊಳುತ್ತದೆ.

ಅಮೇರಿಕ ನಡೆಸುತ್ತಿರುವ ಯುದ್ಧ ತಯಾರಿಯ ವಿರುದ್ಧ ಅಂತರರಾಷ್ಟ್ರೀಯ ಪ್ರತಿಭಟನಾ ಚಳುವಳಿ ನಡೆಸುವಂತೆ ಕ್ರಮ ಕೈಗೊಂಡಿರುವ ಸೆಪ್ಟೆಂಬರ್ ಒಂದನ್ನು ಯುದ್ಧ ವಿರೋಧಿ ದಿನವನ್ನಾಗಿ ಆಚರಿಸಬೇಕೆಂದು ಕರೆ ಕೊಟ್ಟಿರುವ ಡಬ್ಲ್ಯೂ.ಎಫ್.ಟಿ.ಯು.ವನ್ನು ಅಭಿನಂದಿಸುತ್ತದೆ.

ಎಲ್ಲ ರಾಜ್ಯ ಸಮಿತಿಗಳೂ, ಕಾರ್ಮಿಕ ಸಂಘಗಳೂ ಸೆಪ್ಟೆಂಬರ್ 1ರ ದಿನಾಚರಣೆಯನ್ನು ಯಶಸ್ವಿಗೊಳಿಸಿ, ಯುದ್ಧದ ವಿರೋಧವಾಗಿಯೂ ಶಾಂತಿ, ಸಮತಾವಾದ, ಪ್ರಜಾಪ್ರಭುತ್ವದ ರಕ್ಷಣೆಗಾಗಿಯೂ ಹೋರಾಡಬೇಕೆಂದು ಕರೆ ಕೊಡುತ್ತದೆ.

(ಮುಂಬಯಿ ಬಟ್ಟೆ ಗಿರಣಿ ಕಾರ್ಮಿಕರ ಮುಷ್ಕರ, ನಾರು, ಕಲ್ಲಿದ್ದಲು, ಉಕ್ಕು ಮುಂತಾದ ಕೈಗಾರಿಕೆಗಳ ಕುರಿತೂ ನಿರ್ಣಯ ಪಾಸು ಮಾಡಲಾಯಿತು). ●

ಪಿ.ವಿ.ಎಸ್. ಬೀಡಿ ಕಾರ್ಮಿಕರಿಂದ ಮಾಲಿಕರಿಗೆ ಘೆರಾವ್

ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ನೇತೃತ್ವದಲ್ಲಿ ತಾ|| 23-7-82 ರಂದು ಪಿ. ವಿ. ಎಸ್. ಬೀಡಿ ಮಾಲಿಕರನ್ನು ಘೆರಾವ್ ಮಾಡಲಾಯಿತು.

ಸದ್ರಿ ಬೀಡಿ ಮಾಲಿಕರು ಕಾರ್ಮಿಕರಿಗೆ ಸಲ್ಲಬೇಕಾದ 1980–81ನೇ ಸಾಲಿನ ಬೋನಸ್ಸು ಮತ್ತಿತರ ಸವಲತ್ತುಗಳನ್ನು ಕೊಡಲು ನಿರಾಕರಿಸಿದುದರಿಂದ, ರೊಚ್ಚಿಗೆದ್ದ ಕಾರ್ಮಿಕರು ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ| ಬಾಬು ದೇವಾಡಿಗರ ಮುಂದಾಳುತನದಲ್ಲಿ ಪಿ. ವಿ. ಎಸ್. ಆಫೀಸಿನಲ್ಲಿ ಘೆರಾವ್ ನಡೆಸಿದಾಗ ಕಾರ್ಮಿಕ ಶಕ್ತಿಗೆ ಮಣಿದ ಮಾಲಿಕರು ಕಾರ್ಮಿಕರೊಡನೆ ಮಾತುಕತೆಗೆ ಬಂದು ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ಕೊಟ್ಟ ಬಳಿಕ ಘೆರಾವ್ ಹಿಂತೆಗೆದುಕೊಳ್ಳಲಾಯಿತು.

ಅದೇ ಪ್ರಕಾರ ತಾ. 24–7–82 ಸದ್ರಿ ಯೂನಿಯನ್ನಿನ ಕಾರ್ಯದರ್ಶಿಯವರ ಸಮಕ್ಷಮದಲ್ಲಿ ಮಾಲಿಕರು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿದ್ದಾರೆ.

–ಭಾರತದ ಪ್ರಗತಿಶೀಲ ರಾಜಕೀಯದ ಕ್ರಾಂತಿಕಾರಿ ಚರಿತೆ

ಪು ಸ್ತ ಕ ಪ ರಿ ಚ ಯ

ಎ. ಕೆ. ಗೋಪಾಲನ್ ಆತ್ಮಕಥೆ – "ನನ್ನ ಜೀವನದ ಕಥೆ"

—ಎಸ್. ಎಸ್. ಹಿರೇಮಠ

ಸ್ವಾತಂತ್ರ್ಯಕ್ಕಾಗಿ ದೇಶಾದ್ಯಂತ ತೀವ್ರವಾಗಿ ನಡೆಯುತ್ತಿದ್ದ ಚಳುವಳಿಗಳ ಕಾಲದಿಂದ ಹಿಡಿದು, ಸ್ವತಂತ್ರ್ಯ (?) ಭಾರತದ ಮೂವತ್ತು ವರ್ಷಗಳ ತನ್ನಿಡೀ ರಾಜಕೀಯ ಜೀವನಾದ್ಯಂತ ಹೋರಾಟವೇ ಉಸಿರಾಗಿ, ಜನತೆಯ ಕಷ್ಟಗಳೇ ತನ್ನ ಕಷ್ಟವಾಗಿ ಜೀವಿಸಿದ ಮಹಾವ್ಯಕ್ತಿ ಎ. ಕೆ. ಜಿ. ಅವರ ಆತ್ಮ ಚರಿತ್ರೆ "ನನ್ನ ಜೀವನದ ಕಥೆ."

ಈ ಪುಸ್ತಕವನ್ನು ಓದುತ್ತಿದ್ದರೆ, ದೇಶದ ರಾಜಕೀಯದ ಗುಣಾತ್ಮಕ ಪ್ರಗತಿಯ ವಿಮರ್ಶೆಯನ್ನು; (ಬರಬರುತ್ತ ಹೊಲಸೆದ್ದು ನಾರುವ ಭ್ರಷ್ಟ ಕೊಳಕು ರಾಜಕೀಯದ ಮಧ್ಯೆಯೂ ಶುದ್ಧ ರಾಜಕೀಯ ಶಕ್ತಿಯಾಗಿ ಬೆಳೆದು) ಶುದ್ಧ ರಾಜಕೀಯಕ್ಕಾಗಿ ಜೀವ ತೆಯ್ದು ಬೆಳೆಯುತ್ತ ಪಕ್ವವಾದ ಎ. ಕೆ. ಜಿ. ಚೈತನ್ಯವನ್ನು ದರ್ಶಿಸುತ್ತೇವೆ.

ಪ್ರಗತಿಶೀಲ ರಾಜಕೀಯದ ಪ್ರಜಾವಂತ, ನಿಷ್ಠಾವಂತ, ಪ್ರತಿಪಾದಕರಾಗಿ, ಸಾಕ್ಷಿಯಾಗಿ – ಬಂದರು ಎ. ಕೆ. ಜಿ. ಐದನೆಯ ಅಧ್ಯಾಯದಲ್ಲಿ (ಪುಟ 51) ಅವರು "ವಿಶ್ರಾಂತಿ ! ಅದರ ಕುರಿತು ಯೋಚಿಸಲಿಕ್ಕೂ ನನಗೆ ಸಾಧ್ಯವಿರಲಿಲ್ಲ." "ಒಬ್ಬ ಯೋಧನು ವಿಶ್ರಾಂತಿಯ ಕುರಿತು ಯೋಚಿಸುವುದಾದರೂ ಹೇಗೆ ?" ಎಂದೂ "ಹೋರಾಟದ ಮಧ್ಯದಲ್ಲೇ ಜೀವಿಸುವುದೂ, ಚಳುವಳಿಯ ಗಾಳಿಯನ್ನೇ ಸೇವಿಸುವುದೂ, ಪ್ರತಿಗಾಮಿಗಳ ವಿರುದ್ಧ ಹೋರಾಡುವದೂ, ಬಂಧನಕ್ಕೊಳಗಾಗಿ ಜೈಲುವಾಸವನ್ನನುಭವಿಸುವದೂ, ನನ್ನ ಮನೋಧರ್ಮವಾಗಿತ್ತು" ಎಂದೂ (ಪುಟ 85ರಲ್ಲಿ)"ಹಸಿವು ನನ್ನ ನಿರಂತರ ಸಂಗಾತಿಯಾಯಿತು, ನಾನು ಹಸಿವೆಯಿಂದ ಬಳಲದ ದಿನಗಳು ವಿರಳವಾಗಿದ್ದವು" ಎಂದೂ ತಮ್ಮಿಡೀ ಜೀವನದ ಗಾಥೆಯನ್ನೆ ಈ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ. 401 ಪುಟಗಳಷ್ಟು ದೀರ್ಘವಾದ ("ಭಾರತಿ ಪ್ರಕಾಶನ ಮೈಸೂರು ಅನುವಾದ: ಬಿ. ಮಾಧವ.) ಆತ್ಮ ಚರಿತ್ರೆಯನ್ನು ಸಂಗ್ರಹಿಸಲಿಕ್ಕಾಗದು ಎಂದರೆ, ಎ. ಕೆ. ಜಿ. ಅವರ ಮಹಾ ಜೀವನವನ್ನು ಹೋರಾಟದ ಕಥೆಯನ್ನು ಸಂಗ್ರಹಿಸಲಿಕ್ಕಾಗದೆಂದೇ ಅರ್ಥ. ಇಷ್ಟೇ ಅಲ್ಲ, ತಮ್ಮ ಸುದೀರ್ಘ ಹೋರಾಟಗಳೆಷ್ಟನ್ನೋ ಅವರೇ ಹಲವಾರೆಡೆ ಸಂಗ್ರಹಿಸಿ ಬರೆಯಬೇಕಾಗಿ ಬಂದಿದೆ ! ಮುನ್ನುಡಿಯಲ್ಲಿ ಅವರು "ದೀರ್ಘ ಕಾಲದ ರಾಜಕೀಯ ಜೀವನದಲ್ಲಿ ನಾನು ಮಾಡಿದೆಲ್ಲವೂ ಸರಿಯೆಂಬ ಅಹಂಕಾರ ನನಗಿಲ್ಲ. ತಪ್ಪುಗಳು ಖಂಡಿತವಾಗಿಯೂ ಆಗಿರಬಹುದು, ಆದರೆ ನನಗೆ ಒಂದು ಸಂತೃಪ್ತಿ ಇದೆ. ತಪ್ಪೆಂದು ನನಗೆ ತಿಳಿದ ಯಾವುದೇ ದಾರಿಯನ್ನು ನಾನು ಕ್ರಮಿಸಿಲ್ಲ." ಎಂದು ಬರೆಯುವರು.

"1927 ರಿಂದ 1939ರ ವರೆಗೆ ನಾನು ಕಾಂಗ್ರೆಸ್ ಸದಸ್ಯನಾಗಿದ್ದೆ. 1939ರಲ್ಲಿ ಕಾಂಗ್ರೆಸ್ ಬಿಟ್ಟೆ. ಕಾಂಗ್ರೆಸ್ಸಿನ ವರ್ಗಸ್ವಭಾವವನ್ನೂ, ಪ್ರಪಂಚದ ಘಟನೆಗಳನ್ನೂ ಸ್ವಂತ ಅನುಭವದಿಂದ ಅರ್ಥಮಾಡಿಕೊಂಡನಂತರ ನಾನು ಕಾಂಗ್ರೆಸ್ಸಿಗೆ ವಿದಾಯ ಹೇಳಿದೆ. ಸಮಾಜವಾದಿ ಪಕ್ಷದ ಕಾರ್ಯಕ್ರಮವು ಕಮ್ಯುನಿಸ್ಟ್ ವಿರೋಧಿಯೂ, ಸೋವಿಯಟ್ ವಿರೋಧಿಯೂ ಆಗಿದ್ದುದರಿಂದ ನಾನು ಆ ಪಾರ್ಟಿಯಿಂದಲೂ ಹೊರಬಂದೆ. ಇಂತಹ ಒಂದು ಪಾರ್ಟಿಯು ಬಂಡವಾಳಶಾಹಿಯ ಬಾಲಬಡಕನಾಗಿರಲು ಮಾತ್ರವೇ ಸಾಧ್ಯ ಇದರ ನಂತರ ನಾನು ಉತ್ಸಾಹದಿಂದಲೂ, ಆವೇಶದಿಂದಲೂ ಕಮ್ಯುನಿಸ್ಟ್ ಪಾರ್ಟಿಗೆ ಸೇರಿದೆ. ಆದರೆ 'ದೌರ್ಭಾಗ್ಯವಶಾತ್ ಮಾರ್ಕ್ಸ್‌ವಾದ - ಲೆನಿನ್‌ವಾದವನ್ನು ಗಾಳಿಗೆ ತೂರಿ ವರ್ಗ ಸಹಕಾರಕ್ಕಾಗಿ ಕೆಲಸ ಮಾಡುವ ಒಂದು ಪಾರ್ಟಿ ಕಮ್ಯುನಿಸ್ಟ್ ಪಾರ್ಟಿ ಎಂಬ ಹೆಸರಿಗೆ ಅರ್ಹವಾಗುವುದಿಲ್ಲ. ಇದರಿಂದಾಗಿ ನಾನು ಡಾಂಗೆ ಗುಂಪಿಗೆ ವಿದಾಯ ಹೇಳಿದೆ" (357 ಪುಟ) ಎನ್ನುವ ಎ.ಕೆ.ಜಿ. ಅವರು, "ಕಾಂಗ್ರೆಸ್ಸಿನಲ್ಲಿದ್ದಾಗ ನಾನು ಅವರ ಪ್ರೀತಿಪಾತ್ರನಾಗಿದ್ದೆ. ಕಾಂಗ್ರೆಸ್ ಬಿಟ್ಟೊಡನೆ ಅವರಿಗೆ ನಾನೊಬ್ಬ ದೇಶದ್ರೋಹಿಯಾದೆ. ಸೋಷಲಿಸ್ಟ್ ಪಾರ್ಟಿಯಲ್ಲಿದ್ದಾಗ ಜಯಪ್ರಕಾಶ್ ಮತ್ತು ಅಶೋಕ ಮೆಹ್ತಾರಿಗೆ ನಾನೊಬ್ಬ ಒಳ್ಳೆ ಹುಡುಗನಾಗಿದ್ದೆ. ಸೋಷಲಿಸ್ಟ್ ಪಾರ್ಟಿ ಬಿಟ್ಟೊಡನೆ ಅವರಿಗೆ ನಾನು ರಷ್ಯನ್ ಏಜಂಟನಾದೆ. ಡಾಂಗೆ ಗುಂಪೂ ನಾವೂ ಒಟ್ಟಿಗೆ ಇದ್ದಾಗ ನಾನೊಬ್ಬ ನಿಸ್ವಾರ್ಥಿ ಸೇವಕನೂ ಕ್ರಾಂತಿಕಾರಿಯೂ ಆಗಿದ್ದೆ. ಇಂದು ನಾನು ಅವರ ಕಣ್ಣಲ್ಲಿ ಚೀನಿ ಏಜಂಟನೂ, ದೇಶದ್ರೋಹಿಯೂ ಆಗಿದ್ದೇನೆ!" (358) ಎನ್ನುವರು. ಅವರ ಆತ್ಮ ವಿಮರ್ಶೆ, ದೇಶದ ಪ್ರಗತಿಶೀಲ ರಾಜಕೀಯದ ವಿಮರ್ಶೆಯೂ, ಮಾರ್ಗದರ್ಶಕ ಸೂತ್ರವೂ ಆಗಬಲ್ಲದು. ಬದಲಾವಣೆ ಪ್ರಗತಿ ಆಗಲಾರದು. ಆದರೆ ಪ್ರಗತಿಯಲ್ಲಿ ಬದಲಾವಣೆ ಇದ್ದೇ ಇರುತ್ತೆ. ರಾಷ್ಟ್ರದ ಜನತೆಯಲ್ಲಿ ರಾಜಕೀಯ ಬೆಳವಣಿಗೆಯ ಗುಣಾತ್ಮಕ ಪ್ರಗತಿಯ ಲಕ್ಷಣಗಳಿವೆ. ಅದರ ಸಂಕೇತವೇ ಎ. ಕೆ. ಜಿ. ಅವರಂಥ ಮುಖಂಡರು.

8 ಫೆಬ್ರುವರಿ 1981ರ ಐಕ್ಯರಂಗದಲ್ಲಿ ಎ. ಕೆ. ಜಿ. ಅವರ ಜೀವನದ ಮಹತ್ವದ ಘಟನೆಗಳನ್ನು ಸಂಗ್ರಹಿಸಲಾಗಿದೆ. ಅದನ್ನಿಲ್ಲಿ ಮತ್ತೆ ಹೇಳುವ ಅಗತ್ಯವಿಲ್ಲ.

ವಿದ್ಯಾವಂತ ಸುಸಂಸ್ಕೃತ "ದೊಡ್ಡ" ಮನೆತನದಿಂದ, ಬಂದ ಆಯಿಲ್ಯತ್ತ್, ಕುಟ್ಯಾರಿ, ಗೋಪಾಲನ್ ನಂಬ್ಯಾರ್ (ಎ.ಕೆ.ಜಿ.) ಅವರ ಬಾಲ್ಯ ಜೀವನ, ಸಮಾಜ ಸುಧಾರಕರೂ, ನಟರೂ, ಪತ್ರಿಕಾಕರ್ತರೂ ಆದ ತಂದೆಯ; ಉದಾರಿಯೂ, ಪ್ರಗತಿಪರಯೋಚಕಳೂ, ವಾತ್ಸಲ್ಯಮೂರ್ತಿಯಾದ ತಾಯಿಯ ಪರಿಸರದಲ್ಲಿ ಕಳೆಯಿತು. ಅವರ ಕ್ರಾಂತಿಕಾರಿ ಗುಣವನ್ನು ಬಾಲ್ಯದಲ್ಲೆ ಗುರುತಿಬಹುದು. "ಸಾರ್ವಜನಿಕ ಸೇವೆಗಳ ಮೊದಲ ಪಾಠಗಳನ್ನು" ತಂದೆಯಿಂದ ಕಲಿತ ಎ.ಕೆ ಜಿ. ಅಧ್ಯಾಪಕರಾಗಿ (7 ವರ್ಷ), ಸಮಾಜ ಸೇವಕರಾಗಿ, ರಾಷ್ಟ್ರೀಯ ಆಂದೋಲಕರಾಗಿ, ಕಾಂಗ್ರೆಸ್ಸಿಗರಾಗಿ, ಸಮಾಜವಾದಿಯಾಗಿ, ಅವಿಭಜಿತ ಕಮ್ಯುನಿಸ್ಟ್ ಪಾರ್ಟಿಯ ಪ್ರಮುಖರೊಲ್ಲಬ್ಬರಾಗಿ, ಕೊನೆಗೆ ಈ ಸುದೀರ್ಘ ಮಾರ್ಗದ ಪ್ರಗತಿಶೀಲ ಬೆಳವಣಿಗೆಯ ತುಟ್ಟತುದಿ ಎಂಬಂತೆ, ಪರಿಪಕ್ವ ರಾಜಕೀಯ ಬೆಳವಣಿಗೆಯಾಗಿ (ಭಾರತದ ರಾಜಕೀಯ ಬೆಳವಣಿಗೆಯ ಮುನ್‌ಸೂಚನೆ) ಸಿ. ಪಿ. ಐ. (ಎಂ) ಪ್ರಧಾನರಲ್ಲೊಬ್ಬರಾಗಿ, ಬೆಳೆಯುತ್ತ, ಹೋರಾಡುತ್ತ ("ಘರ್ಷಣೆಯಲ್ಲೆ ಪ್ರಗತಿ ಇದೆ"—ದ್ವಂದ್ವಮಾನ ಭೌತಿಕವಾದದ ಪ್ರಮುಖಾಂಶ) ಬಂದ ಮಹೋನ್ನತ ಜೀವ. ಮಾನವ ಕುಲಕೋಟಿಗೆ ಆದರ್ಶಪ್ರಾಯ. ಭಾರತದ ಕಮ್ಯುನಿಸ್ಟ್ ಚಳುವಳಿಯಲ್ಲಿ ಚಿರವಾಗಿ ಉಳಿಯುವ ಸ್ಫೂರ್ತಿಯುತ ಚೇತನ.

ಗೋಪಾಲನ್ ಅವರು ಮಾಡಿದ ಹೋರಾಟದ ನಾನಾ ಮುಖಗಳು ಪರಿಚಯ ಒಂದು ಸುದೀರ್ಘ ಮಹಾಕಾವ್ಯದ ವಸ್ತು ಆಗಬೇಕಾಗುವಂಥದು ! "ನನಗೆ ಸೆರೆಮನೆ ಜೀವನವೆಂದರೆ ಹಾಸ್ಟೆಲ್ ಜೀವನವಿದ್ದಂತೆ." (24 ಪುಟ)ಎನ್ನುತ್ತಾರೆ ಎ.ಕೆ.ಜಿ. ಒಂದೆಡೆ. ತಮ್ಮ ರಾಜಕೀಯ ಜೀವನದ ಬಹು ಪಾಲು (17 ವರ್ಷ) ಜೀವನವನ್ನು ಜೇಲುಗಳಲ್ಲೇ ಕಳೆಯಬೇಕಾಯಿತು ಅವರು. ದೇಶಕ್ಕೆ ಸ್ವಾತಂತ್ರ್ಯ ಬಂದ 1947ರ ಸಂದರ್ಭದಲ್ಲೂ, ["ಯಾವ ಉದ್ದೇಶಕ್ಕಾಗಿ ನನ್ನ ಯೌವನವನ್ನೆಲ್ಲಾ ಸವೆದು ಇಂದು ಕೂಡ ಜೈಲಿನಲ್ಲಿ ಮಲಗಿದ್ದೆನೋ ಆ ಉದ್ದೇಶವು ಈಡೇರಿದ್ದಕ್ಕೆ ನನಗೆ ಸಂತೋಷವಾಯಿತು....ಆದರೆ ಕಾಂಗ್ರೆಸ್ಸಿಗರಿಂದ ನಾನು ಜೈಲಿನಲ್ಲಿ ಇರುವಂತಾಗಿದೆ...ಕೇರಳದ ಕಾಂಗ್ರೆಸ್ ಚಳುವಳಿಯಲ್ಲಿ ನಾನು ವಹಿಸಿದ ಪಾತ್ರವನ್ನು ನೆನೆದು ಹೆಮ್ಮೆಪಟ್ಟೆ. ಕೇರಳದ ಪ್ರದೇಶ ಕಾಂಗ್ರೆಸ್ಸಿನ ಕಾರ್ಯದರ್ಶಿಯೂ, ಅಧ್ಯಕ್ಷನೂ ದೀರ್ಘ ಕಾಲದ ತನಕ ಎ.ಐ.ಸಿ.ಸಿ. ಸದಸ್ಯನೂ ಆಗಿದ್ದ ವ್ಯಕ್ತಿಯೊಬ್ಬನು ಅಗಸ್ಟ್ 15ನ್ನು ಆಚರಿಸುತ್ತಿದುದು ಜೈಲಿನೊಳಗೆ!" (217)]. ಕೇರಳಕ್ಕೆ ಚುನಾವಣೆ ಮೂಲಕ ಕಮ್ಯುನಿಸ್ಟರು ಅಧಿಕಾರ ಬಂದಾಗಲೂ, ಎ.ಕೆ.ಜಿ. ಜೈಲಿನಲ್ಲೇ ಇರಬೇಕಾಗಿತ್ತು, ಇದೆಂಥ ವಿಪರ್ಯಾಸ, ಆದರೆ ಕಟು ವಾಸ್ತವ. ಬೂರ್ಷ್ವಾ ಅಧಿಕಾರದ, ರಾಜ್ಯಗಳಲ್ಲಿ ಕಮ್ಯುನಿಸ್ಟ್ ಅಧಿಕಾರದ ಇತಿಮಿತಿಯ ಅರ್ಥಪೂರ್ಣ ಸೂಚಕ. ["1947ರಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿದಾಗಲೂ 1972ರಲ್ಲಿ ಸ್ವಾತಂತ್ರ್ಯದ 25ನೇ ವಾರ್ಷಿಕೋತ್ಸವ ವೇಳೆಯಲ್ಲೂ ನನ್ನನ್ನು ಜೈಲಿನಲ್ಲಿ ಬಂಧಿಸಿ ಇಟ್ಟಿದ್ದು ಸ್ವಾತಂತ್ರ್ಯದ ಒಂದು ವಿಡಂಬನೆ. ಸ್ವಾತಂತ್ರ್ಯ, ಪ್ರಗತಿ ಮತ್ತು ಸಮಾಜವಾದಕ್ಕಾಗಿ ನಡೆಸುವ ಹೋರಾಟವು ಇನ್ನೂ ಭಾರತದ ಜನತೆಯ ಪ್ರಧಾನ ಅವಶ್ಯಕತೆಯಾಗಿದೆಯೆಂಬುದನ್ನು ಇದು ಸೂಚಿಸುವುದು."—385]

"ಆ ದಿನಗಳಲ್ಲಿ ಒಳನಾಡು ಪ್ರದೇಶಗಳಲ್ಲಿ ಬೆಟ್ಟಗಳನ್ನು ಹತ್ತಿ ಇಳಿದು, ಕಣಿವೆಗಳನ್ನು ದಾಟಿ, ಕಾಫಿ ನೀರು ಕುಡಿದು, ನಡೆದುಕೊಂಡೇ ನನ್ನಂತಹವರು ಕಾಂಗ್ರೆಸ್ ಪತಾಕೆಗಳನ್ನು ಏರಿಸಿದ್ದು" (27 ಪುಟ). "ಜನತೆ ನನ್ನನೊಬ್ಬ ಭಾಷಣಕಾರನನ್ನಾಗಿ ಮಾಡಿತು. ಅವರ ಸಮಸ್ಯೆಗಳೂ ಸಂಕಷ್ಟಗಳೂ ನಿತ್ಯ ಹೋರಾಟಗಳೂ ನನ್ನ ಆಯುಧಗಳಾದವು" (31 ಪುಟ). ಒಂದಾಣೆಯಲ್ಲಿ ಚುರುಮುರಿ, ತಿಂದು ಎಷ್ಟೆಷ್ಟೊ ಮೈಲು ನಡೆದು, ಉಪವಾಸ, ನಿದ್ದೆ, ಆರೋಗ್ಯದೆಡೆಗೆ ಲಕ್ಷ್ಯವಿಲ್ಲದೆ, ವಿಪರೀತ ಕಷ್ಟ ಅನುಭವಿಸಿ, ತಾಸುಗಟ್ಟಲೆ ಭಾಷಣ ಮಾಡುತ್ತ; ಸಂಘಟನೆ ಮಾಡಿ, ಮೂರ್ಛೆರೋಗಗಳನ್ನು ಬರಿಸಿಕೊಂಡು ["ನನ್ನ ದೇಹವು ಹಳೆಯ ಮತ್ತು ಹೊಸ ರೋಗಗಳಿಂದ ತುಂಬಿತ್ತು. ಒಂದು ರೋಗಕ್ಕೆ ಔಷಧಿ ಕೊಟ್ಟರೆ ಅದು ಇನ್ನೊಂದಕ್ಕೆ ಅಪಥ್ಯವಾಗುವದು. ಎಷ್ಟೋ ಕಾಲದಿಂದ ಯಾವ ಚಿಕಿತ್ಸೆಯನ್ನೂ ಪಡೆಯದೆ ನನ್ನ ಆರೋಗ್ಯವನ್ನು ನಿರ್ಲಕ್ಷಿಸಿದ್ದುದರಿಂದ ಹಲವು ಕಾಯಿಲೆಗಳು ನನ್ನ ದೇಹದಲ್ಲಿ ಶಾಶ್ವತವೆಂಬಂತೆ ಮನೆ ಮಾಡಿದ್ದವು" —253—ಒಬ್ಬ ಕ್ರಾಂತಿಕಾರಿಯ ಕಷ್ಟದ ಜೀವನ ಸ್ಥಿತಿ ಇದು] ಕೆ. ಪಿ. ಸಿ.ಸಿ. ಸಭೆಗಳಿಗೆ, ಹೋಗಬೇಕಾದರೆ ಎರಡೆರಡು ದಿನ ಸ್ನೇಹಿತರಿಗಾಗಿ ಕಾದು ಟಿಕೆಟ್ ತೆಗೆದು, ಹೋಗುವುದು (96 ಪುಟ) ಇವೇ ಅಸಂಖ್ಯ ಕಷ್ಟಗಳನ್ನು ಅನುಭವಿಸಿ ಹೋರಾಡಿದರು ಎ.ಕೆ.ಜಿ.

ಕೇರಳದ ಜನತೆ ಭಾರತದಲ್ಲೇ ವಿಶಿಷ್ಟವಾದ ರೀತಿಯಲ್ಲಿ ಪ್ರಗತಿಪರ ರಾಜಕೀಯ ಪ್ರಜ್ಞಾವಂತರಾಗುತ್ತ ಬಂದರು. ಇದಕ್ಕೆಲ್ಲ ಎ. ಕೆ. ಜಿ., ಇ ಎಂ.ಎಸ್. ಅವರಂಥವರು ಜೀವ ತೆಯ್ದು ದುಡಿದದ್ದೇ ಕಾರಣ. ಕೇರಳದ ಜನತೆಯಲ್ಲಿ, ನಂತರ ದೇಶದ ನಾನಾ ಭಾಗಗಳ ಜನತೆಯಲ್ಲಿ ಸಂಘಟನೆಯ, ಹೋರಾಟದ, ಅನಿವಾರ್ಯತೆಯನ್ನು, ಪ್ರಗತಿಶೀಲ ರಾಜಕೀಯದ ಪ್ರಜ್ಞೆಯನ್ನು ಬೆಳೆಸುವಲ್ಲಿ ಮಹಾಪಾತ್ರ ವಹಿಸಿದ ಎ. ಕೆ. ಜಿ. ಭಾರತದ ರಾಜಕೀಯ ಅನಿವಾರ್ಯ ಮತ್ತು ಸಹಜ ಬೆಳವಣಿಗೆಯ ಮುನ್ನೋಟವೇ ಆಗುತ್ತಾರೆ.

ಪ್ರಗತಿಪರ ವೈಜ್ಞಾನಿಕ ದೃಷ್ಟಿಯಿಂದ ದೇಶದ ರಾಜಕೀಯ, ವಿಶ್ಲೇಷಣೆ ಮಾಡುವುದರಿಂದ, ರಾಜಕೀಯ ಕಾರ್ಯಕರ್ತರಿಗಷ್ಟೇ ಅಲ್ಲ ದುಡಿವ ಜನತೆಗೆ ಒಳ್ಳೆಯ ಮಾರ್ಗದರ್ಶಿಯಾಗಬಲ್ಲ, ಜೀವನಾನುಭವದ ಅನೇಕ ಘಟನೆಗಳನ್ನು, ವಿವರಗಳನ್ನು ಪುಸ್ತಕದ ತುಂಬ ಕಾಣುತ್ತೇವೆ. (ಉದಾ :— "ಕಮ್ಯುನಿಸ್ಟ್ ಪಾರ್ಟಿ ಇಬ್ಭಾಗ", ಎಂಬ ಅಧ್ಯಾಯ ಅಭ್ಯಾಸಯೋಗ್ಯವಾದುದು, "ಕಮ್ಯುನಿಸ್ಟ್ ಮಂತ್ರಿ ಮಂಡಳ"— ಮುಂತಾದವು)

(7ನೇ ಪುಟ ನೋಡಿ)

ನಿಷ್ಠಾವಂತ, ಪ್ರಾಮಾಣಿಕ ಕಾರ್ಯಕರ್ತರು ಕಮ್ಯುನಿಸ್ಟರು ಮಾತ್ರ ಆಗಬಲ್ಲರೆಂಬುದನ್ನು ಎ. ಕೆ. ಜಿ. ಜೀವನ ಕಥೆ ಸ್ಪಷ್ಟಪಡಿಸುತ್ತದೆ. ಎ. ಕೆ. ಜಿ. ಅನುಭವಗಳು, ಅಭ್ಯಾಸ, ಪರಾಮರ್ಶ, ವಿಮರ್ಶೆಗಳ ಮೂಲಕ 'ನಿಜವಾದ ದಾರಿ'ಯನ್ನು ಅರಸುತ್ತ ನಿಷ್ಠಾವಂತ ಕಮ್ಯುನಿಸ್ಟರಾಗಿ ರೂಪಗೊಂಡರು.

ನೆರೆಹೊರೆಯಿಂದ

ಲಿಂಗ ನಿರ್ಧಾರಣಾ ಪರೀಕ್ಷೆ

ಜನಸಂಖ್ಯಾ ನಿಯಂತ್ರಣಕ್ಕೆ ಹೆಣ್ಣು ಭ್ರೂಣಹತ್ಯೆ?

ಈ ಪ್ರಶ್ನೆಯೆತ್ತಿದವರು ನವದೆಹಲಿಯ ಕಾನ್‌ಸ್ಟಿಟ್ಯೂಶನ್ ಕ್ಲಬ್‌ನಲ್ಲಿ ಜುಲೈ 15 ರಂದು ಸಭೆ ವಿವಿಧ ಸೇರಿದ ದೇಶದ ಮಹಿಳಾ ಸಂಘಟನೆಗಳ ಕಾರ್ಯಕರ್ತೆಯರು, ಡಾಕ್ಟರುಗಳು, ವಿಜ್ಞಾನಿಗಳು ಇತ್ಯಾದಿ. ಪಂಜಾಬ್, ದಿಲ್ಲಿ, ಮುಂಬೈ, ಲಕ್ನೋ, ಮೀರಜ್, ಇತ್ಯಾದಿ ನಗರಗಳಲ್ಲಿನ ಪತ್ರಿಕೆಗಳಲ್ಲಿ ಕೆಲವು ದಿನಗಳ ಹಿಂದೆ ಪ್ರಕಟವಾಗುತ್ತಿದ್ದ ಕೆಲವು ಜಾಹೀರಾತುಗಳ ಸಾರಾಂಶವಿದು—"ಭಾರತೀಯ ಸಮಾಜದಲ್ಲಿ ಕೇವಲ ಹೆಣ್ಣು ಮಕ್ಕಳನ್ನೇ ಹೊಂದಿದ್ದು ಗಂಡು ಮಕ್ಕಳನ್ನು ನಿರೀಕ್ಷಿಸುವ ಕುಟುಂಬಗಳು ಮಾನಸಿಕ ಹಾಗೂ ಆರ್ಥಿಕ ಒತ್ತಡದಿಂದ ನರಳುವುದಲ್ಲದೆ ದೇಶದ ಜನಸಂಖ್ಯೆಯ ಮೇಲೆ ಇದು ದುಷ್ಪರಿಣಾಮ ಬೀರುತ್ತಿದೆ. ವಿಜ್ಞಾನ ಈಗ ಇಂತಹ ಕುಟುಂಬಗಳ ರಕ್ಷಣೆಗೆ ಬಂದಿದೆ. ಲಿಮಿನೋಸೆಂಟಿಸಿಸ್ ಎಂಬ ಲಿಂಗ ನಿರ್ಧಾರಣಾ ಪರೀಕ್ಷೆಯ ಮೂಲಕ ಹೆಣ್ಣು ಭ್ರೂಣಗಳನ್ನು ತೊಲಗಿಸಲು ಸಾಧ್ಯವಾಗಿದೆ. ರೂ. 500 ರಿಂದ ರೂ. 1000ದವರೆಗೆ ತೆರಲು ಸಾಧ್ಯವಿರುವ ತಂದೆ-ತಾಯಂದಿರು ಇದರ ಪ್ರಯೋಜನ ಪಡೆಯಬಹುದು." ಈ ನಗರಗಳಲ್ಲಿನ ಕೆಲವರು ಖಾಸಗೀ ವೈದ್ಯರು ಕೊಟ್ಟ ಜಾಹೀರಾತಿದು. ಹೆಣ್ಣಿನ ಬಗ್ಗೆ ತುಚ್ಛ ಭಾವನೆ ಹೊಂದಿರುವ ನಮ್ಮ ಸಮಾಜದ ಕೆಟ್ಟ ಊಳಿಗಮಾನ್ಯ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸಲು ವಿಜ್ಞಾನವನ್ನು ಈ ರೀತಿ ದುರುಪಯೋಗಪಡಿಸುವುದರ ವಿರುದ್ಧ ದೇಶಾದ್ಯಂತ ತೀವ್ರ ಆಕ್ರೋಶ ವ್ಯಕ್ತಪಟ್ಟಿದೆ. ಜುಲೈ 15 ರಂದು ನಡೆದ ಮೇಲೆ ಹೇಳಿದ ಸಭೆ ಇದರ ಒಂದು ಪ್ರತೀಕ. ಅಖಿಲ ಭಾರತ ಪ್ರಜಾಪ್ರಭುತ್ವವಾದೀ ಮಹಿಳಾ ಸಂಘ ಹಾಗೂ ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಈ ಸಭೆಯನ್ನು ಏರ್ಪಡಿಸಿದ್ದವು.

ಡಾ. ವೀಣಾ ಮುಜುಂದಾರ್ ಈ ಸಭೆಯಲ್ಲಿ ಮಾತನಾಡುತ್ತಾ, ಈಗಾಗಲೇ ಪುರುಷ-ಮಹಿಳೆಯ ಅನುಪಾತ ಕಮ್ಮಿಯಾಗುತ್ತಿದ್ದು ಅಸಮಾನತೆಯಿರುವ ನಮ್ಮ ಸಮಾಜದಲ್ಲಿ ಈಗ ಲಿಂಗ ನಿರ್ಧಾರಣಾ ಪರೀಕ್ಷೆಗಳ ಮೂಲಕ ಜನಸಂಖ್ಯಾ ಸಮಸ್ಯೆಯನ್ನು ನಾಝೀ ವಿಧಾನದಲ್ಲಿ ಪರಿಹರಿಸಲು ನಾವು ಪ್ರಯತ್ನಿಸುತ್ತಿದ್ದೇವೆಯೇ ಎಂದು ಪ್ರಶ್ನಿಸಿದರು. "ನಾವು ಬಯಸುವ ಸಮಾಜ ಹಾಗೂ ಮೌಲ್ಯಗಳಾದರೂ ಯಾವುವು ಎಂಬುದೇ ಈಗ ನಮ್ಮ ಮುಂದಿರುವ ಪ್ರಶ್ನೆ" ಎಂದು ಅವರು ಹೇಳಿದರು.

"ರಾಜಸ್ತಾನ್, ಬಿಹಾರ್ ಇತ್ಯಾದಿ ಕಡೆ ಹೆಣ್ಣು ಮಕ್ಕಳು ಕುಟುಂಬಕ್ಕೆ ಹೊರೆಯೆಂದು ಪರಿಗಣಿಸಿ ಅವು ಹುಟ್ಟಿದ ಕೂಡಲೇ ಕೊಲ್ಲುತ್ತಾರೆಂಬುದನ್ನು ನಾವು ತಿಳಿದಿದ್ದೇವೆ. ಇನ್ನಷ್ಟು ಹೆಣ್ಣು ಮಕ್ಕಳು ಪೋಷಕ ಆಹಾರವಿಲ್ಲದೆ, ವೈದ್ಯಕೀಯ ಸೌಲಭ್ಯವಿಲ್ಲದೆ ಸಾಯುತ್ತವೆ. ಈಗ ಹೆಣ್ಣು ಭ್ರೂಣಗಳ ಹತ್ಯೆ ದೊಡ್ಡ ವ್ಯಾಪಾರವಾಗಿಬಿಟ್ಟಿದೆ. ವೈದ್ಯರಿಗೆ ದುಡ್ಡುಗಳಿಸುವ ಸಾಧನವಾಗಿ ಬಿಟ್ಟಿದೆ" ಎಂದು ಸುಶೀಲಾ ಗೋಪಾಲನ್ ಹೇಳಿದರು.

ಈ ರೀತಿಯ ಲಿಂಗ ನಿರ್ಧಾರಣಾ ಪರೀಕ್ಷೆಯ ಮೇಲೆ ಪ್ರತಿಬಂಧ ಹೇರಬೇಕೆಂದು ವಿಮಲಾ ರಣದಿವೆಯವರು ಮಂಡಿಸಿದ ಗೊತ್ತುವಳಿಗೆ ಸಭೆಯಲ್ಲಿ ಹಾಜರಿದ್ದ ವಿಜ್ಞಾನಿಗಳು, ವೈದ್ಯರು ಸೇರಿದಂತೆ ಎಲ್ಲರೂ ಬೆಂಬಲ ಸೂಚಿಸಿದರು. ಕೆಲವರು ಗೊತ್ತುವಳಿಯನ್ನು ಇನ್ನಷ್ಟು ಬಲಪಡಿಸಲು ತಿದ್ದುಪಡಿಗಳನ್ನೂ ಸೂಚಿಸಿದರು.

ಆಂಧ್ರ ಪ್ರದೇಶ ಸಮಾವೇಶದ ಕರೆ

ನಾಗರಿಕ ಹಕ್ಕುಗಳನ್ನು ರಕ್ಷಿಸಲು ಸಾಮೂಹಿಕ ಆಂದೋಲನ ಆಗಬೇಕು

ಸಂವಿಧಾನದತ್ತವಾದ ನಾಗರಿಕ ಹಕ್ಕುಗಳನ್ನು ರಕ್ಷಿಸಲು ಜನಸಾಮಾನ್ಯರ ಪ್ರಜ್ಞೆಯನ್ನು ಹೆಚ್ಚಿಸುವ ಮೂಲಕ ಒಂದು ವಿಶಾಲ ವೇದಿಕೆ ರಚನೆ ಈಗಿನ ಅವಶ್ಯಕತೆಯೆಂದು ಜುಲೈ 4 ರಂದು ಹೈದರಾಬಾದಿನಲ್ಲಿ ನಡೆದ ಆಂಧ್ರ ಪ್ರದೇಶ ರಾಜ್ಯ ಸಮಾವೇಶದಲ್ಲಿ ಅಭಿಪ್ರಾಯಪಡಲಾಯಿತು. ಸಿ.ಪಿ.ಐ. (ಎಂ), ಸಿ.ಪಿ.ಐ., ಜನತಾ, ಲೋಕದಳ, ಕಾಂಗ್ರೆಸ್ (ಎಸ್), ಡಿ.ಎಸ್. ಪಿ. ನಾಯಕರು ಹಾಗೂ ಹಲವು ಡಾಕ್ಟರುಗಳು, ವಕೀಲರು ಮತ್ತು ಇತರ ಬುದ್ಧಿ ಜೀವಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ನಾಗರಿಕ ಹಕ್ಕುಗಳು, ಪ್ರಜಾಪ್ರಭುತ್ವ ಹಕ್ಕುಗಳಿಲ್ಲದೆ ಒಂದು ದೇಶ ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವಕ್ಕೆ ಕಂಟಕಪ್ರಾಯವಾಗುವ ರೀತಿಯಲ್ಲಿ ಪರಿಸ್ಥಿತಿಯನ್ನು ರೂಪಿಸಲಾಗುತ್ತಿದೆ. ಮೀಸಾ, ನಾಸಾ, ಎಸ್ಮಾ ಇತ್ಯಾದಿ ಕರಾಳ ಕಾಯಿದೆಗಳ ಮೂಲಕ ಜನರ ನಾಗರಿಕ ಹಕ್ಕುಗಳನ್ನು ತುಳಿದು ಹಾಕಲಾಗುತ್ತಿದೆ. ಆಂಧ್ರ ಪ್ರದೇಶದಲ್ಲಿ ಇಷ್ಟು ಮಾತ್ರವಲ್ಲದೆ ಪೋಲೀಸ್, ಭೂಮಾಲಿಕ ಹಾಗೂ ಗೂಂಡಾಗಳ ಕೂಟ ಭಯೋತ್ಪಾದಕ ಕೆಲಸಗಳಲ್ಲಿ ನಿರತವಾಗಿದೆ. ರಾಜ್ಯದ ಹಲವೆಡೆ ಸಮಾಜ ಘಾತಕ ಶಕ್ತಿಗಳು, ಆಳುವ ಪಕ್ಷ, ಪೋಲೀಸ್ ಹಾಗೂ ಆಡಳಿತದ ಒಂದು ವಿಭಾಗ ಇವರೆಲ್ಲರ ಒಂದು ಅಪಾಯಕಾರೀ ಕೂಟ ಏರ್ಪಟ್ಟಿದೆ. ಈ ಕೂಟದ ಉದ್ದೇಶ ಜನಪ್ರಿಯ ಆಂದೋಲನಗಳ ಮೇಲೆ ಹಲ್ಲೆ ನಡೆಸುವುದು ಮಾತ್ರವಲ್ಲ ಪ್ರತಿಪಕ್ಷಗಳ ರಾಜಕೀಯ ಕಾರ್ಯಕರ್ತರನ್ನು ಮುಗಿಸಿಬಿಡುವುದೂ ಈ ಕೂಟದ ಉದ್ದೇಶ. ವಾರಂಗಲ್, ನಲಗೊಂಡಾ, ಕಮ್ಮಂ, ಕರೀಂನಗರ, ಆದಿಲಾಬಾದ್ ಇತ್ಯಾದಿ ಸ್ಥಳಗಳಲ್ಲಿ ಸಿ. ಪಿ. ಐ. (ಎಂ) ಹಾಗೂ ಇತರ ಪ್ರತಿಪಕ್ಷಗಳ ನಾಯಕರ ಮೇಲೆ ನಡೆದ ಮರಣಾಂತಿಕ ಹಲ್ಲೆಗಳು ಈ ಕೂಟದ ಸಂಚಿನ ಒಂದು ಅಂಗವೇ ಆಗಿದೆ. ಅಲ್ಲದೆ ಮಹಿಳೆಯರ ಮೇಲೆ ಅತ್ಯಾಚಾರ, ಪೋಲೀಸ್ ಲಾಕಪ್ಪುಗಳಲ್ಲಿ ಅಮಾಯಕ ಜನರಿಗೆ ಹಿಂಸೆ, 'ಮುಖಾಮುಖಿ'ಯ ನೆವದಲ್ಲಿ ಕಾನೂನು ವಿಧಾನಗಳನ್ನು ಬದಿಗೆ ತಳ್ಳುವುದು ಇವು ಎಗ್ಗಿಲ್ಲದೆ ನಡೆಯುತ್ತಿವೆ. ಇವೆಲ್ಲವನ್ನೂ ಕೊನೆಗೊಳಿಸಲೇಬೇಕು. ಸದಾ ಜಾಗರೂಕವಾಗಿರುವ ಸಾಮೂಹಿಕ ಆಂದೋಲನ, ಅದರ ಜತೆಗೇ ನಾಗರಿಕ ಹಕ್ಕುಗಳ ಬಗ್ಗೆ ಎಚ್ಚರ ಹಾಗೂ ಸಂಘಟಿತ ಸಾರ್ವಜನಿಕ ಅಭಿಪ್ರಾಯ ಮೂಡಿ ಬಂದರೆ ಮಾತ್ರ ಈ ಪತನದಿಂದ ದೇಶವನ್ನು ರಕ್ಷಿಸಲು ಸಾಧ್ಯವೆನ್ನುತ್ತದೆ ಸಮಾವೇಶದ ಹೇಳಿಕೆ. ಇದಕ್ಕಾಗಿ ನಾಗರಿಕ ಹಕ್ಕುಗಳಿಗೆ ಬೆಂಬಲವಾಗಿ ಒಂದು ಶಕ್ತಿಶಾಲೀ ಪ್ರಜಾಪ್ರಭುತ್ವವಾದೀ ಆಂದೋಲನ ನಡೆಸಬೇಕೆಂದು ಸಮಾವೇಶ ಎಲ್ಲಾ ಪ್ರಜ್ಞಾವಂತ ಜನತೆಗೆ ಮನವಿ ಮಾಡಿದೆ.

ಉಕ್ಕು ಕಾರ್ಮಿಕರ ಐಕ್ಯ ಹೋರಾಟದ ಹೊಸ ಹೆಜ್ಜೆ

ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿಯ ನಿರ್ಣಯದಂತೆ ಬೊಕಾರೋ ಸ್ಟೀಲ್ ಸಿಟಿಯಲ್ಲಿ ಜುಲೈ 17 ಹಾಗೂ 18 ರಂದು ಅಖಿಲ ಭಾರತ ಉಕ್ಕು ಕಾರ್ಮಿಕರ ಸಮಾವೇಶ ಯಶಸ್ವಿಯಾಗಿ ನಡೆಯಿತು. ಎಲ್ಲಾ ಉಕ್ಕು ಸ್ಥಾವರಗಳಿಂದ ಬಂದಿದ್ದ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳ ಈ ಸಮಾವೇಶ ವಿವಿಧ ಸಂಘಗಳು ಅರ್ಪಿಸಿರುವ ಬೇಡಿಕೆ ಪತ್ರಗಳನ್ನು ಒಪ್ಪಿಕೊಳ್ಳುವಂತೆ ಕಾರ್ಖಾನೆಗಳ ಆಡಳಿತ ವರ್ಗಗಳ ಮೇಲೆ ಒತ್ತಡತರಲು ಜಂಟೀ ಹೋರಾಟ ನಡೆಸಬೇಕೆಂದು ನಿರ್ಧರಿಸಿದಾಗ ಸಭೆ ಅತೀವ ಹರ್ಷೋದ್ಗಾರದಿಂದ ನಿರ್ಣಯವನ್ನು ಸ್ವಾಗತಿಸಿತು.

ಬಿ. ಪಿ. ಇ. ಯ ನಿರ್ದೇಶನಗಳು ಹಾಗೂ ಸರಕಾರದ ವೇತನ ಸ್ತಂಭನ ಧೋರಣೆಯ ವಿರುದ್ಧ ಐಕ್ಯ ಹೋರಾಟ ನಡೆಸಬೇಕೆಂದು ಸಮಾವೇಶದಲ್ಲಿ ಹಲವು ಭಾಷಣಕಾರರು ಅಭಿಪ್ರಾಯ ವ್ಯಕ್ತಪಡಿಸಿದರು. ಉಕ್ಕಿನ ಕಾರ್ಖಾನೆಗಳಲ್ಲಿ ಹೆಚ್ಚುತ್ತಿರುವ ಅಧಿಕಾರಶಾಹಿ, ಅವ್ಯವಹಾರ, ಭ್ರಷ್ಟಾಚಾರ, ಕಾರ್ಮಿಕರ ಸಂಕಷ್ಟಗಳ ಬಗ್ಗೆ ನಿರ್ಲಕ್ಷ್ಯ, ಕಾಂಟ್ರಾಕ್ಟ್ ಕಾರ್ಮಿಕರ ಭಯಾನಕ ಪರಿಸ್ಥಿತಿ, ಕಾಂಟ್ರಾಕ್ಟ್ ಕಾರ್ಮಿಕರಿಗೆ ಅನ್ವಯವಾಗುವ ಕಾನೂನುಗಳನ್ನು ಪಾಲಿಸದಿರುವುದು ಇವೆಲ್ಲದರ ಬಗ್ಗೆ ಸಮಾವೇಶ ಚರ್ಚಿಸಿತು.

ಸಿ.ಐ.ಟಿ.ಯು. ಕಾರ್ಯದರ್ಶಿ ಎಂ. ಕೆ. ಪಂಧೆ ನಿರ್ಣಯವನ್ನು ಮಂಡಿಸಿದರು. ನಿರ್ಣಯದಲ್ಲಿ ಬಿ. ಪಿ. ಇ.ಯ ಕಾರ್ಮಿಕ ವಿರೋಧಿ ನಿರ್ದೇಶಗಳನ್ನು, ಎಸ್.ಎ.ಐ.ಎಲ್.ನ ಆಡಳಿತ ವರ್ಗದ ಕಾಲಹರಣದ ತಂತ್ರಗಳನ್ನು ಕಟುವಾಗಿ ಟೀಕಿಸಲಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಉಕ್ಕು ಕೈಗಾರಿಕೆಯಲ್ಲಿನ ಉತ್ಪಾದನೆಯಲ್ಲಿ ವೇತನ ಬಾಬ್ತಿಗಾಗಿ ಖರ್ಚಾದ ಮೊತ್ತದ ಅನುಪಾತ 18 ಶೇಕಡದಿಂದ 13 ಶೇಕಡಕ್ಕಿಳಿದಿದೆ. ಅಂದರೆ ಕಾರ್ಮಿಕರು ಹೆಚ್ಚು ಉತ್ಪಾದನೆ ನೀಡಿದರೂ ಅವರಿಗೆ ಸಿಕ್ಕ ಪ್ರತಿಫಲ ಹೆಚ್ಚಿಲ್ಲ. ಮಾತ್ರವಲ್ಲ ಕಡಿಮೆಯಾಗಿದೆ! ಬಿ.ಪಿ.ಇ. ನಿರ್ದೇಶನಗಳನ್ನು ಉಕ್ಕು ಕಾರ್ಮಿಕರ ಮೇಲೆ ಹೇರಿದರೆ ಈ ಕಾರ್ಮಿಕರ ಜೀವನಮಟ್ಟ ಇನ್ನಷ್ಟು ಕೆಳಗಿಳಿಯುತ್ತದೆ ಎಂದು ನಿರ್ಣಯ ಹೇಳುತ್ತದೆ. ಆದ್ದರಿಂದ ತಮ್ಮ ಜೀವನಮಟ್ಟ ಕಾದುಕೊಳ್ಳಲು ವೇತನ ಸ್ಥಗಿತದ ಧೋರಣೆಯನ್ನು ಬಲವಾಗಿ ಎದುರಿಸಬೇಕೆಂದು ಸಮಾವೇಶದ ನಿರ್ಣಯ ಕರೆ ಕೊಟ್ಟಿದೆ. ಹೋರಾಟದ ಅಂಗವಾಗಿ ಆಗಸ್ಟ್ 15 ರೊಳಗೆ ಘಟಕ ಮಟ್ಟದ ಸಮಾವೇಶ, ಆಗಸ್ಟ್ 25 ರಿಂದ 31ರವರೆಗೆ ಪ್ರತಿಭಟನಾ ಸಪ್ತಾಹ, ಆಗಸ್ಟ್ 30, 31 ರಂದು ಎಲ್ಲಾ ಉಕ್ಕು ಸ್ಥಾವರಗಳಲ್ಲಿ ಧರಣಿ ಹಾಗೂ ಪ್ರತಿಭಟನಾ ಪ್ರದರ್ಶನ, ನಂತರ ಅಗತ್ಯವಾದರೆ ಉಕ್ಕು ಕೈಗಾರಿಕೆಯಲ್ಲಿ ಅಖಿಲ ಭಾರತ ಮುಷ್ಕರ ನಡೆಸಲು ಸಮಾವೇಶ ನಿರ್ಧರಿಸಿದೆ.

ಈ ಸಮಾವೇಶದ ಸಂಘಟಕರಲ್ಲಿ ಒಬ್ಬರಾದ ಎಚ್. ಎಂ. ಎಸ್. ನಾಯಕತ್ವ ಕೊನೇಗಳಿಗೆಯಲ್ಲಿ ಭಾಗವಹಿಸದಿರಲು ನಿರ್ಧರಿಸಿತು. ಆದರೂ ಸಮಾವೇಶದ ನಿರ್ಣಯಗಳನ್ನು ಅದೂ ಪಾಲಿಸುವುದೆಂದು ಸಮಾವೇಶ ನಿರೀಕ್ಷಿಸಿದೆ.

ತ್ರಿಪುರಾ

ಬಂಗಾಳದಲ್ಲಾಗದಿದ್ದರೆ ಇಲ್ಲಿ ಏಕಾಗಬಾರದು?

ತ್ರಿಪುರಾ ರಾಜ್ಯ ಸರಕಾರ ಅಕ್ಟೋಬರ್ 19ರ ಮೊದಲು ರಾಜ್ಯ ವಿಧಾನ ಸಭೆಗೆ ಚುನಾವಣೆ ನಡೆಸುವಂತೆ ಕೇಳಿದೆ. ಇದರಿಂದಾಗಿ ಪರಸ್ಪರ ಕಚ್ಚಾಟ ನಡೆಸುತ್ತಿದ್ದ ಕಾಂಗ್ರೆಸ್ (ಐ)ನ ವಿವಿಧ ಗುಂಪುಗಳ ನಡುವೆ ಕಾನೂನು ವ್ಯವಸ್ಥೆಯನ್ನು ಬುಡಮೇಲು ಮಾಡಿ ಕಾಂಗ್ರೆಸ್(ಐ)ನ ಗುಂಪು ಸಮೀಕರಣದಲ್ಲಿ ತಮ್ಮ ಕೈಮೇಲಾಗುವಂತೆ ಅವು ಸ್ಪರ್ಧೆಗಿಳಿದಂತೆ ಕಾಣುತ್ತಿದೆ. ತುರ್ತುಪರಿಸ್ಥಿತಿ ಮುಖ್ಯ ಮಂತ್ರಿ ಸುಖಮಯ್ ಸೇನ್ ಗುಪ್ತ ನೇತೃತ್ವದ ಗುಂಪು ಪೋಲೀಸ್‌ನ ಒಂದು ವಿಭಾಗವನ್ನು ಬಗಲಿಗೆ ಹಾಕಿಕೊಂಡು ತೀವ್ರ ಹಿಂಸಾಚಾರ ನಡೆಸುತ್ತಿದೆ. ಇದುವರೆಗೆ ಈ ಗುಂಪಿನ ಭಯೋತ್ಪಾದಕ ಕೃತ್ಯಗಳಿಗೆ ಸಿ.ಪಿ.ಐ. (ಎಂ)ನ ಹಲವು ಉತ್ತಮ ಕಾರ್ಯಕರ್ತರು ಬಲಿಯಾಗಿದ್ದಾರೆ. ಈ ಕೊಲೆಗಾರರನ್ನು ಸಿಟ್ಟಿಗೆದ್ದ ಜನತೆಯೇ ಹಿಡಿದುಕೊಟ್ಟರೂ ಕೆಲವು ಪೋಲೀಸ್ ಠಾಣೆಗಳು ಆ ಬಗ್ಗೆ ಯಾವುದೇ ಕ್ರಮ ತಗೊಳ್ಳದಿರುವುದು ಕಾಂಗ್ರೆಸ್ (ಐ)ನ ಸಂಚಿನ ಫಲವೇ. ಹಲವು ಕಡೆ ಕಾಂಗ್ರೆಸ್ (ಐ) ಗೂಂಡಾಗಳಿಗೆ ಪೋಲೀಸ್ ಠಾಣೆಗಳೇ ಕಾರ್ಯಕ್ಷೇತ್ರವಾಗಿಬಿಟ್ಟಿವೆ. ಈ ಗೂಂಡಾಗಳ ಬಂಧನವಾಗಬೇಕಾದರೆ ರಾಜ್ಯದ ಐ.ಜಿ.ಪಿ. ಯವರೇ ಸ್ವತಃ ಆಜ್ಞೆ ಮಾಡಬೇಕಾಗಿ ಬಂತು. ಒಂದೆರಡು ಕಡೆ ಪೋಲೀಸರು ಅನಗತ್ಯವಾಗಿ ಗುಂಡು ಹಾರಿಸಿದ ಬಗ್ಗೆ ತನಿಖೆ ನಡೆದು ಇಬ್ಬರು ಎ.ಎಸ್.ಐ. ಸೇರಿದಂತೆ ನಾಲ್ವರು ಪೋಲೀಸ್ ಸಿಬ್ಬಂದಿಯನ್ನೇ ಬಂಧಿಸಬೇಕಾಗಿ ಬಂದಿದೆ. ಇದರೊಂದಿಗೆ ಟಿ.ಯು.ಜೆ.ಎಸ್. ಹಾಗೂ ಆನಂದ ಮಾರ್ಗಿ ಪ್ರತಿಕ್ರಿಯಾವಾದಿಗಳೂ ಕಾಂಗ್ರೆಸ್ (ಐ)ಗೆ ಸಕ್ರಿಯ ಬೆಂಬಲ ನೀಡುತ್ತಿದ್ದಾರೆ.

ಕೆಲವೇ ತಿಂಗಳುಗಳಲ್ಲಿ ನಡೆಯಲಿರುವ ವಿಧಾನ ಸಭಾ ಚುನಾವಣೆಗಳಲ್ಲಿ ಜನತೆಯ ತೀರ್ಪಿನ ಬಗ್ಗೆ ತೀವ್ರ ಭಯಗೊಂಡಿರುವ ಇವರೆಲ್ಲಾ ಈ ಚುನಾವಣೆಗಳು ನಡೆಯದಂತೆ, ರಾಜ್ಯದ ಮೇಲೆ ರಾಷ್ಟ್ರಪತಿ ಆಳ್ವಿಕೆ ಹೇರುವಂತೆ ಮಾಡಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನೂ ನಡೆಸುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲೂ ಕಾಂಗ್ರೆಸ್(ಐ) ನಡೆಸಿದ್ದೂ ಇದೇ ತಾನೇ? ಕೊಲೆ, ಸುಲಿಗೆ, ಹಿಂಸಾತ್ಮಕ ಬಂದ್‌ಗಳ ಮೂಲಕ ತ್ರಿಪುರಾದಲ್ಲಿ ಅದನ್ನು ಪುನಃ ಪ್ರಯತ್ನಿಸಲಾಗುತ್ತಿದೆ ಎಂಬುದು ಸುಸ್ಪಷ್ಟ.

ಪಶ್ಚಿಮ ಬಂಗಾಳ

ಸೆಣಬು ಗುತ್ತೇದಾರಿಗಳ ಕುತಂತ್ರಗಳ ವಿರುದ್ಧ ಕಾರ್ಮಿಕರ ಮುಷ್ಕರ

ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ, ಟಿ.ಯು.ಸಿ.ಸಿ ಹಾಗೂ ಐ.ಎನ್.ಟಿ.ಯು.ಸಿ.ಯ ಜಂಟೀ ಕರೆಯ ಮೇರೆಗೆ ಪಶ್ಚಿಮ ಬಂಗಾಳದ ಎರಡೂವರೆ ಲಕ್ಷ ಸೆಣಬು ಕಾರ್ಮಿಕರು ಆಗಸ್ಟ್ 10 ರಂದು ಸಾಂಕೇತಿಕ ಮುಷ್ಕರ ನಡೆಸಲಿದ್ದಾರೆ. ಅಗಾಧ ಲಾಭ ಗಳಿಸಿದರೂ ಅದನ್ನು ಸೆಣಬು ಕೈಗಾರಿಕೆಯಲ್ಲಿ ತೊಡಗಿಸದೆ ಸೆಣಬು ಕೈಗಾರಿಕೆಯಲ್ಲಿ ಭವಿಷ್ಯ ಕರಾಳವಾಗಿದೆ ಎಂದು ಸುಳ್ಳೀ ಬೊಬ್ಬೆ ಹಾಕುತ್ತಿರುವ ಸೆಣಬು ಗುತ್ತೇದಾರಿಗಳ ಕುತಂತ್ರಗಳನ್ನು ಬಯಲುಗೊಳಿಸಲು ಈ ಮುಷ್ಕರ ನಡೆಯಲಿದೆ. ಸೆಣಬು ನಾರಿನ ಚೀಲಗಳಿಗೆ ಅಂತರಿಕ ಮಾರುಕಟ್ಟೆಯಲ್ಲಿ ಬೇಡಿಕೆ ಕಮ್ಮಿಯಾಗುತ್ತಿದೆಯೆಂಬ ನೆವದಲ್ಲಿ ಸೆಣಬು ಉತ್ಪಾದನೆಯಲ್ಲಿ ಪ್ರತಿದಿನ ನಾಲ್ಕು ಗಂಟೆಗಳ ಕಡಿತ ಮಾಡಬೇಕೆಂದ ನಾಲ್ಕು ಗುತ್ತೇಗಾರೀ ವ್ಯಾಪಾರೀ ಮನೆತನಗಳ ಹತೋಟಿಯಲ್ಲಿರುವ ಭಾರತೀಯ ಸೆಣಬು ತಯಾರಕರ ಸಂಘ ಸೆಣಬು ಕಾರ್ಖಾನೆಗಳ ಮಾಲೀಕರಿಗೆ ಆದೇಶವಿತ್ತಿದೆ. ಆದರೆ ಸರಕಾರೀ ನಿಯಂತ್ರಣದ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ ಸೆಣಬು ಉತ್ಪಾದನೆಯನ್ನು ಅಂತರರಾಷ್ಟ್ರೀಯ ಮಾರುಕಟ್ಟೆ ಬೆಲೆಯಾಗಿ ಸಂಪೂರ್ಣವಾಗಿ ತಾನು ಕೊಳ್ಳಲು ಸಿದ್ಧ ಎಂದು ತಿಳಿಸಿದರೂ ಅತೀವ ಲಾಭಕೋರರಾದ ಸೆಣಬು ಗುತ್ತೇದಾರಿಗಳು ಅದನ್ನು ನಿರಾಕರಿಸುತ್ತಿದ್ದಾರೆ. ರಿಸರ್ವ್ ಬ್ಯಾಂಕ್ ಕಚ್ಚಾ ಸಬಣು ಕೊಳ್ಳಲೆಂದು ಕೊಟ್ಟ 200 ಕೋಟಿ ರೂ. ಸಾಲವನ್ನು ಈ ಗುತ್ತೇದಾರೀ ಮಾಲೀಕರು ಬೇರೆ ಕೈಗಾರಿಕೆಗಳಲ್ಲಿ ತೊಡಗಿಸಿದ್ದಾರೆ ಎಂದು ಕೇಂದ್ರ ಹಣಕಾಸಿನ ಮಂತ್ರಿಯವರೂ ಖೇದ ವ್ಯಕ್ತಪಡಿಸಿದ್ದಾರೆ ಎಂಬುದು ಗಮನಾರ್ಹ.

ಮುಚ್ಚಿರುವ 16 ಕಾರ್ಖಾನೆಗಳನ್ನು ತಕ್ಷಣ ಬೇಷರತ್ತಾಗಿ ತೆರೆಯಬೇಕು, ಉತ್ಪಾದನಾ ಕಡಿತವನ್ನು ನಿಲ್ಲಿಸಬೇಕು ಹಾಗೂ ಸೆಣಬು ಬೆಳೆಗಾರರಿಗೆ ಪ್ರತಿ ಕ್ವಿಂಟಾಲ್‌ಗೆ 300 ರೂ. ಕನಿಷ್ಟ ಬೆಂಬಲ ಬೆಲೆ ಕೊಡಬೇಕೆಂದು ಕಾರ್ಮಿಕ ಸಂಘಗಳು ಒತ್ತಾಯಿಸಿವೆ.

ಕಲ್ಲಿದ್ದಲು ಕಾರ್ಮಿಕರು ಐಕ್ಯ ಹೋರಾಟಕ್ಕೆ ಸಿದ್ಧವಾಗುತ್ತಿದ್ದಾರೆ

ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಲನ ಸಮಿತಿಯ ನಿರ್ಣಯದಂತೆ ಭಾರತದ್ಯಾಂತ ಉಕ್ಕು ಸ್ಥಾವರಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಒಂದೆಡೆಸೇರಿ ಐಕ್ಯ ಹೋರಾಟ ಆರಂಭಿಸಿದ್ದರೆ ಇನ್ನೊಂದು ಪ್ರಮುಖ ಕೈಗಾರಿಕೆಯಾದ ಕಲ್ಲಿದ್ದಲು ಗಣಿಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಐಕ್ಯ ಹೋರಾಟ ಅರಂಭಿಸಲಿದ್ದಾರೆ.

1979ರ ಆಗಸ್ಟ್‌ನಲ್ಲಿ ಕಲ್ಲಿದ್ದಲು ಕೈಗಾರಿಕೆಯ ಜಂಟೀ ದ್ವಿಪಕ್ಷೀಯ ಸಮಿತಿಯ ಸಮ್ಮುಖದಲ್ಲಿ, 'ರಾಷ್ಟ್ರೀಯ ಕಲ್ಲಿದ್ದಲು ವೇತನ ಒಪ್ಪಂದ II' ಎಂದು ಹೆಸರಾದ ಒಪ್ಪಂದ ಜ್ಯಾರಿಯಾದಾಗ ಇತ್ಯರ್ಥವಾಗದೇ ಉಳಿದಿದ್ದ ಹಲವು ವಿವಾದಗಳಲ್ಲಿ (ಉದಾ : ಗಣಿ ಕಾರ್ಮಿಕರ ಮಕ್ಕಳಿಗೆ ಶಿಕ್ಷಣ ಹಾಗೂ ವೈದ್ಯಕೀಯ ಸೌಲಭ್ಯ, ಗಾಯಗೊಂಡವರಿಗೆ ಪರಿಹಾರ, ದುಡಿಮೆಯ ಪರಿಸ್ಥಿತಿಯನ್ನು ಏಕರೂಪಗೊಳಿಸುವುದು, ಗ್ರಾಚ್ಯುಟಿ, ವಸತಿ ಸೌಕರ್ಯ ಇತ್ಯಾದಿ) ನಂತರದ ಕೆಲವೇ ತಿಂಗಳಲ್ಲಿ ಪರಿಹರಿಸಬೇಕೆಂದು ಕಲ್ಲಿದ್ದಲು ವ್ಯವಸ್ಥಾಪಕ ವರ್ಗಕ್ಕೆ ನಿರ್ದೇಶನ ನೀಡಲಾಗಿತ್ತು. ಆದರೆ ಈ ಬಗ್ಗೆ ಇದುವರೆಗೂ ಏನೂ ನಡೆದಿಲ್ಲ. ಮಾತ್ರವಲ್ಲ ಸಾಧ್ಯವಿರುವ ಒಪ್ಪಂದದ ಅವಧಿ ಈ ವರ್ಷದ ಕೊನೆಯಲ್ಲಿ ಮುಗಿಯಲಿದ್ದು ಹೊಸ ಒಪ್ಪಂದ ಮಾಡಿಕೊಳ್ಳಲು ಆಡಳಿತ ವರ್ಗ ನಿರಾಕರಿಸುತ್ತಿದೆ. ಆದ್ದರಿಂದ ಈ ಎಲ್ಲಾ ವಿವಾದಗಳ ಇತ್ಯರ್ಥಕ್ಕಾಗಿ ಒತ್ತಾಯ ತರಲು ಮುಷ್ಕರವೂ ಸೇರಿದಂತೆ ಇತರ ಎಲ್ಲಾ ಕ್ರಮಗಳ ಬಗ್ಗೆ ಚರ್ಚಿಸಲು ಭಾರತದಾದ್ಯಂತ ಕಲ್ಲಿದ್ದಲು ಕೈಗಾರಿಕೆಯಲ್ಲಿ ದುಡಿಯುತ್ತಿರುವ ಎಲ್ಲಾ ಕಾರ್ಮಿಕರ ಪ್ರತಿನಿಧಿಗಳ ಸಮಾವೇಶವೊಂದು ಈ ತಿಂಗಳು ಧನ್‌ಬಾದ್‌ನಲ್ಲಿ ನಡೆಯಲಿದೆ.

ವಕೀಲರ ಸಂಘದಲ್ಲಿ ಕಾಂ|| ಬಿ. ಟಿ. ಆರ್. ಅವರ ಭಾಷಣ

'ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿ' ಎಂಬ ವಿಷಯದ ಕುರಿತು ಜುಲೈ 27 ರಂದು ಬೆಂಗಳೂರು ವಕೀಲರ ಸಂಘದ ಆಶ್ರಯದಲ್ಲಿ ವಕೀಲರನ್ನುದ್ದೇಶಿಸಿ ಕಾಂ| ಬಿ ಟಿ. ರಣದಿವೆಯವರು ಮಾತನಾಡಿದರು

—ವರದಿ : ಬಿ. ಕಾ. ಮೂರ್ತಿಶ್ವರಯ್ಯ

ಕಾಂ| ಬಿ. ಟಿ. ಆರ್. ಮಾತನಾಡುತ್ತಾ "ಸಂಸದೀಯ ಪ್ರಜಾಪ್ರಭುತ್ವದ ಸಾಮಾನ್ಯ ನಿಯಮವೆಂದರೆ ಕಾನೂನಿನ ನಿಯಮಾ (Rule of Law) ನುಸಾರವಾಗಿ ರಾಷ್ಟ್ರದ ಆಡಳಿತ ವ್ಯವಸ್ಥೆ ನಡೆಯಬೇಕಿರುತ್ತದೆ; ಇದು ನಡೆಯುತ್ತಿದೆಯೇ ಎಂಬುದೇ ಪ್ರಶ್ನೆ. ನೂರಾರು, ಸಾವಿರಾರು ಜನ ವಿಚಾರಣಾಧೀನ (under Trials) ಕೈದಿಗಳಾಗಿ ಬಂದೀಖಾನೆಗಳಲ್ಲಿ ಕೊಳೆಯುತ್ತಿದ್ದಾರೆ. ಬಿಹಾರ್ ಇತರೆ ಜೈಲುಗಳಲ್ಲಿ ವಿಚಾರಣಾಧೀನ ಕೈದಿಗಳಿಗೆ ಕಣ್ಣು ಕುಕ್ಕುತ್ತಿರುವ ಘಟನೆಗಳನ್ನು ನೋಡಿದಾಗ ಈ ಸಂಶಯ ಬರುತ್ತದೆ" ಎಂದರು.

ಅವರು ಮುಂದುವರೆದು "ಭಾರತದಲ್ಲಿ ಬಹಳಷ್ಟು ಜನರು ಬಡತನದ ರೇಖೆಯ ಕೆಳಗೆ ಬದುಕುತ್ತಿದ್ದಾರೆ. ನಿರುದ್ಯೋಗ ಸಮಸ್ಯೆ ಬೃಹದ್ಹಾಕಾರವಾಗಿದೆ. ಎಲ್ಲ ರಂಗಗಳಲ್ಲೂ ಮೇಲು–ಕೀಳು ಭಾವನೆಯನ್ನು ನಾವು ಕಾಣಬಹುದು, ಜನರಿಂದ ಮತಗಳನ್ನು ಪಡೆದು ಆಯ್ಕೆಯಾಗಿ ಬಂದ ಒಂದು ವರ್ಗ ಮಾತ್ರ ಅಧಿಕಾರ ನಡೆಸುತ್ತಾ ಎಲ್ಲ ಸೌಲಭ್ಯಗಳನ್ನು ಅನುಭವಿಸುತ್ತಿರುವುದನ್ನು ಕಾಣಬಹುದು. ಈ ವೈಪರೀತ್ಯಗಳನ್ನು ಗಮನಿಸಿದಾಗ ವರ್ಗ ಹೋರಾಟ ಅನಿವಾರ್ಯ ಎಂಬುದು ಸ್ಪಷ್ಟ" ಎಂದರು.

"ಸ್ವತಂತ್ರಗೊಂಡ ಬಹಳಷ್ಟು ರಾಷ್ಟ್ರಗಳಲ್ಲಿ, ಯಾವ ಯಾವ ರಾಷ್ಟ್ರಗಳಲ್ಲಿ ಸಂಸದೀಯ ಪ್ರಜಾಪ್ರಭುತ್ವವನ್ನು ತನ್ನ ಆಡಳಿತ ವ್ಯವಸ್ಥೆಗೆ ಅಳವಡಿಸಿಕೊಳ್ಳಲಾಗಿನೆಯೋ ಅಲ್ಲಿ, ಸಂಸದೀಯ ಪದ್ಧತಿ ವಿಫಲವಾದುದನ್ನು ಇತಿಹಾಸ ತೋರಿಸಿ ಕೊಟ್ಟಿದೆ" ಎಂದು ಬಿ. ಟಿ. ಆರ್. ತಿಳಿಸಿದರು.

"ಪ್ರಾಚೀನ ಸಮಾಜದಲ್ಲಿ ಊಳಿಗ ಮಾನ್ಯ ವ್ಯವಸ್ಥೆ ಇದ್ದುದರಿಂದ ಅಸಮಾನತೆ ಎಂಬುದು ಇತ್ತು. ಈ ವ್ಯವಸ್ಥೆಗಳ ನಿರ್ಮೂಲನಕ್ಕಾಗಿ ಆಗಿನ ಜನರು ಹೋರಾಟಗಳನ್ನು ನಡೆಸಬೇಕಾಯಿತು. ತತ್ಸಂಬಂಧದಲ್ಲಿ ಫ್ರಾನ್ಸ್, ಅಮೇರಿಕಾಗಳಲ್ಲಿ ಬದಲಾವಣೆಗಾಗಿ ಹೋರಾಟ ನಡೆದವು. ಈ ಘಟನೆಗಳಿಂದ ಪ್ರಭಾವಿತರಾಗಿ ನಮ್ಮ ಸ್ವಾತಂತ್ರ್ಯ ಹೋರಾಟವೂ ಚುರುಕುಗೊಂಡು ದೇಶ ಸ್ವತಂತ್ರವಾಯಿತು. ಸ್ವತಂತ್ರ ಭಾರತದಲ್ಲಿ ಎಲ್ಲರೂ ಸಮಾನರು ಎಂದು ಹೇಳಲಾಯಿತು. ಆದರ ವಾಸ್ತವವೇನು ?" ಎಂದು ಪ್ರಶ್ನಿಸಿದ ಬಿ. ಟಿ. ಆರ್., ಅಸ್ಪೃಶ್ಯರನ್ನು ಪಶುಗಳಿಗಿಂತ ಕೀಳಾಗಿ ನಡೆಸಿಕೊಳ್ಳುತ್ತಿರುವುದಕ್ಕೆ ವ್ಯಥೆ ವ್ಯಕ್ತಪಡಿಸಿದರು. "ಭಾರತದಲ್ಲಿ ಪ್ರಜಾಪ್ರಭುತ್ವ ಮತ್ತು ಕಾನೂನಿನ ನಿಯಮ ಎರಡೂ ಛಿದ್ರವಾಗತೊಡಗಿವೆ" ಎಂದು ಕಳವಳ ವ್ಯಕ್ತಪಡಿಸಿದರು.

ಈ ಬಗೆಯ ಪ್ರಜಾಪ್ರಭುತ್ವ ಮುಂದುವರೆದದ್ದಾದರೆ, ನಾಳೆಯ ದಿನ ಭಾರತದ ದಂಡ ಸಂಹಿತೆ (ಐ.ಪಿ.ಸಿ.) ಯನ್ನು ರದ್ದುಗೊಳಿಸಿ 'ಮನುಸ್ಮೃತಿ' ಯನ್ನು ಅನುಷ್ಠಾನಕ್ಕೆ ತಂದರೆ ಆಶ್ಚರ್ಯವಿಲ್ಲ. ಭಾರತದ ಸಂವಿಧಾನದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ; ಸಂಘಟನಾ ಮತ್ತು ಚಳವಳಿ ಸ್ವಾತಂತ್ರ್ಯವಿದೆ. ಆದರೆ ಕಾನೂನು ಮತ್ತು ಶಾಂತಿ ಪರಿಪಾಲನೆಯ ಹೆಸರಿನಲ್ಲಿ ಈ ಹಕ್ಕುಗಳ ಗಮನ ಸುವ್ಯವಸ್ಥಿತವಾಗಿ ನಡೆಯುತ್ತಿದೆ ಎಂದ ಅವರು, ಇದನ್ನು ಸರಿಯೆಂದು ಸುಪ್ರೀಂ ಕೋರ್ಟ್ ಹೇಳಲು ಸಾಧ್ಯವಿದೆಯೇ ಎಂದು ಪ್ರಶ್ನಿಸಿದರು.

"ಈಗಿನ ಸರಕಾರ ಇನ್ನೂ 4-5 ನ್ಯಾಯಾಧೀಶರನ್ನು ನೇಮಿಸುವ ಮೂಲಕ ಸರ್ವೋಚ್ಚ ನ್ಯಾಯಾಲಯವನ್ನು 'ಬೇರೆ ಏನನ್ನಾದರೂ' ಆಗಿ ಪರಿವರ್ತಿಸುವ ಸಾಧ್ಯತೆ ಇದೆ. ನ್ಯಾಯಾಂಗವನ್ನು ಆಳುವ ವರ್ಗ ತನ್ನ ಮರ್ಜಿಯಂತೆ ನಡೆಯಬೇಕೆಂದು ಅಪೇಕ್ಷಿಸುವುದಾದರೆ ಇದು ಪ್ರಜಾಪ್ರಭುತ್ವವೇ ?" ಎಂದು ಕಾಂ| ಬಿ. ಟಿ. ಆರ್. ಪ್ರಶ್ನಿಸಿದರು.

ಐದು ವರ್ಷಗಳಿಗೊಮ್ಮೆ ಜನರೆಡೆ ಗಮನ ಹರಿಸುವ ಆಳುವ ವರ್ಗದವರನ್ನು ಕಟುವಾಗಿ ಟೀಕಿಸಿದ ಕಾಂ| ಬಿ. ಟಿ. ಆರ್., 5 ವರ್ಷಕ್ಕೊಮ್ಮೆ ಪಂಚಮಿ ಬರುತ್ತದೆ ಎಂದು ಇಂದಿನ ವ್ಯವಸ್ಥೆಯ ಕುರಿತು ವ್ಯಂಗ್ಯವಾಡಿದರು.

"ಇಂದಿನ ಸಮಾಜದಲ್ಲಿ ಆಳುವ ವರ್ಗಕ್ಕೂ, ಜನಸಮುದಾಯಕ್ಕೂ ಘರ್ಷಣೆ ಉಂಟಾಗುತ್ತಿರುವುದನ್ನು ಕಾಣಬಹುದು. ಜನಪರ ಹೋರಾಟಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಹತ್ತಿಕ್ಕುತ್ತಿರುವುದನ್ನು ನೋಡಿದರೆ ಸರ್ವಾಧಿಕಾರಿ ಪ್ರಭುತ್ವದ ಲಕ್ಷಣಗಳು ಬೆಳೆಯುತ್ತಿರುವುದನ್ನು ಕಾಣಬಹುದು. ಇತ್ತೀಚಿತ್ತಲಾಗಿ ಜನ ತನ್ನ ಹಕ್ಕುಗಳನ್ನು ಅರ್ಥಮಾಡಿಕೊಳುತ್ತಿದ್ದಾರೆ. ಸಂವಿಧಾನದಲ್ಲಿ ಏನಿದೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಸಂವಿಧಾನವೇ ಬೇರೆ; ರೂಢಿಯಲ್ಲಿರುವುದೇ ಬೇರೆ ಎಂಬುದನ್ನು ಅರಿತುಕೊಳ್ಳುತ್ತಿದ್ದಾರೆ" ಎಂದು ಬಿ. ಟಿ. ಆರ್. ನುಡಿದರು.

"ಭಾರತದಲ್ಲಿ ಇಂದು ಸಂಸದೀಯ ಪ್ರಜಾಪ್ರಭುತ್ವ ಪದ್ಧತಿ ಕುಸಿಯುತ್ತಿದೆ. ಇದನ್ನು ಕಂಡುಕೊಂಡ ಆಳುವ ವರ್ಗದವರು, ಬಂಡವಾಳಶಾಹಿಗಳು, ವಾಣಿಜ್ಯ ಉದ್ಯಮಿಗಳು ರಹಸ್ಯವಾಗಿ ಒಂದು ಒಪ್ಪಂದಕ್ಕೆ ಬಂದಿದ್ದು ಪ್ರಜಾಪ್ರಭುತ್ವ ಪದ್ಧತಿಯನ್ನು ರದ್ದುಪಡಿಸುವ ತೀರ್ಮಾನಕ್ಕೆ ಬಂದಿದ್ದಾರೆ" ಎಂದು ಬಿ. ಟಿ. ಆರ್. ತಿಳಿಸಿದರು.

"ಭಾರತದ ಸಾಕ್ಷ ಅಧಿನಿಯಮದ ಪ್ರಕಾರ ಜೀವನದಲ್ಲಿ ವ್ಯಕ್ತಿಯ ಯೋಗ್ಯತೆ (Stateus of Indu–vidiale) ಯನ್ನು ಪರಿಗಣಿಸಬೇಕೆಂದು ಹೇಳುತ್ತದೆ. ಬಿರ್ಲಾ ಮಗನಿಗೂ, ಒಬ್ಬ ಸಾಮಾನ್ಯನ ಮಗನಿಗೂ ಯಾವ ರೀತಿ ಯೋಗ್ಯತೆಯನ್ನು ಪರಿಗಣಿಸಬೇಕು ?" ಎಂದು ಅವರು ಪ್ರಶ್ನಿಸಿದರು.

"ಸಮಾಜದಲ್ಲಿ ಅಸಮಾನತೆಗೆ ಆರ್ಥಿಕ ಕ್ಷೇತ್ರದಲ್ಲಿನ ಅಸಮಾನತೆಯೇ ಕಾರಣ. ಉತ್ಪಾದನಾ ಒಡೆತನ ಜನತೆಯದಾಗಬೇಕು. ಇದು ಎಲ್ಲಿಯವರೆಗೆ ಸಾಧ್ಯವಿಲ್ಲವೋ, ಅಲ್ಲಿಯವರೆಗೆ ಬಂಡವಾಳ ವರ್ಗ, ಶ್ರಮಿಕವರ್ಗ ಇದ್ದೇ ಇರುತ್ತವೆ. ಆರ್ಥಿಕ ಕ್ಷೇತ್ರದಲ್ಲಿನ ಅಸಮಾನತೆ ರಾಜಕೀಯ ರಂಗದ ಮೇಲೆ ಪರಿಣಾಮ ಬೀರುತ್ತದೆ. ರಾಜಕೀಯ ರಂಗದಲ್ಲಿನ ಅಸಮಾನತೆ ಎಂದರೆ ಪ್ರಜಾಪ್ರಭುತ್ವದ ನಾಶಕ್ಕೆ ಮಾರ್ಗ ಎಂದು ಹೇಳಬೇಕಾಗುತ್ತದೆ" ಎಂದು ಬಿ. ಟಿ. ಆರ್. ತಿಳಿಸಿದರು.

ಕಾಂ| ರಣದಿವೆಯವರು ತಮ್ಮ ಭಾಷಣ ಮುಗಿಸಿದ ಮೇಲೆ ವಕೀಲ ವೃಂದದವರು ಅನೇಕ ಪ್ರಶ್ನೆಗಳನ್ನು ಕೇಳಿದರು. ಕಾಂ| ಬಿ.ಟಿ.ಆರ್. ಎಲ್ಲ ಪ್ರಶ್ನೆಗಳಿಗೂ ಸೂಕ್ತ ಉತ್ತರ ನೀಡಿದರು. ಒಬ್ಬರು ರಣದಿವೆಯವರನ್ನು ಈ ರೀತಿ ಪ್ರಶ್ನಿಸಿದರು : ಕಮ್ಯುನಿಸ್ಟರು ಕೊಲೆಗಡುಕರೆಂಬ ಆರೋಪವಿದೆಯಲ್ಲ ?. ಕಾಂ| ಬಿ. ಟಿ. ಆರ್. ಈ ರೀತಿ ಉತ್ತರಿಸಿದರು : ಇದು ಕಮ್ಯೂನಿಸ್ಟರ ಮೇಲೆ ನಡೆಯುವ ಮಿಥ್ಯಾರೋಪಗಳಲ್ಲಿ ಒಂದು; ಕಮ್ಯೂನಿಸ್ಟರು ಕೊಲೆ ಮಾಡಿದರೆಂದು ಹೇಳುತ್ತಾರೆಯೇ ವಿನಃ ಎಷ್ಟು ಜನ ಕಮ್ಯೂನಿಸ್ಟರು ಕೊಲೆಗೀಡಾದರು ಎಂಬುದು ಬೆಳಕಿಗೇ ಬರುವದಿಲ್ಲವೆಂದ ರಣದಿವೆ, ತುರ್ತುಪರಿಸ್ಥಿತಿಯಲ್ಲಿ ಪ. ಬಂಗಾಳದಲ್ಲಿ ನಡೆದ ಘಟನೆಗಳ ನಿದರ್ಶನ ನೀಡಿದರು. ನಮ್ಮ ಸಂಗಾತಿಗಳ ಮೇಲೆ ದೌರ್ಜನ್ಯ ನಡೆಸಲು ಬಂದಾಗ, ಜೀವಕ್ಕೆ ಅಪಾಯವುಂಟು ಮಾಡಲು ಬಂದಾಗ ನಮ್ಮ ಸಂಗಾತಿಗಳೇನು ಮಾಡಬೇಕು? ಎಂದು ಪ್ರಶ್ನಿಸಿದ ಬಿ.ಟಿ.ಆರ್., ನಾವು ಪ್ರಜಾಪ್ರಭುತ್ವ ಪದ್ಧತಿಗಳಿಗೆ ಅನುಸಾರವಾಗಿ ನಡೆಯುವವರೆಂದು ಹೇಳಿ 'ಮೈಸೂರು ಪಾಕ್' ಕೊಟ್ಟು ಸುಮ್ಮನಿರಲು ಸಾಧ್ಯವೇ ? ಎಂದುತ್ತರಿಸಿದರು.

—ಕುಮಾರ್ ಕುಂದಾಪುರ

ಅಂತರ ರಾಷ್ಟ್ರೀಯ

ಧೈರ್ಯ, ಶೌರ್ಯ ಹಾಗೂ ಬದ್ಧತೆಯ ಹೊಸ ಅಧ್ಯಾಯ : ಪಿ. ಎಲ್. ಓ. ಹೋರಾಟ

ಲೆಬನಾನ್ ಮೇಲಿನ ಇಸ್ರೇಲ್ ಆಕ್ರಮಣ ಜಗತ್ತಿನ ವಿಮೋಚನಾವಾದಿ ಚಳುವಳಿಗೆ ದೊಡ್ಡ ಸವಾಲು. ಇಸ್ರೇಲನ್ನು ಸಂಪೂರ್ಣವಾಗಿ ಬೆಂಬಲಿಸಿರುವ ಸಾಮ್ರಾಜ್ಯಶಾಹಿ ಅಮೇರಿಕದ ಜನವಿರೋಧಿ ಧೋರಣೆ ಮತ್ತೊಮ್ಮೆ ಬಯಲಾಗಿದೆ. ಜಗತ್ತಿನ ಜನಾಭಿಪ್ರಾಯಕ್ಕೆ ವಿರೋಧವಾಗಿ ಇಸ್ರೇಲ್ ಸ್ವತಂತ್ರ ಲೆಬನಾನ್ ಮೇಲೆ ನಗ್ನ ದಾಳಿನಡೆಸಿದೆ. ಈ ದಾಳಿಯ ಮೂಲ ಉದ್ದೇಶ ಪ್ಯಾಲಸ್ಟೈನ್ ವಿಮೋಚನಾ ಸಂಘಟನೆ (ಪಿ ಎಲ್.ಓ.)ಯನ್ನು ಧ್ವಂಸಗೊಳಿಸಿ ಅವರುಗಳು ತಮ್ಮದೇ ಆದ ನಾಡಿಗಾಗಿ ಮತ್ತೆ ಕೂಗೆಬ್ಬಿಸದಂತೆ ಮಾಡುವುದು. ಅಮೇರಿಕನ್ ಬೆಂಬಲದೊಡನೆ ಇಸ್ರೇಲ್ ನಡೆಸುತ್ತಿರುವ ಈ ಜನಾಂಗ ಹತ್ಯೆಯನ್ನು ಇಡೀ ಜಗತ್ತೇ ಏಕಕಂಠದಿಂದ ಖಂಡಿಸಿದೆ. ಇಸ್ರೇಲ್‌ನ ಜನತೆ ಹಾಗೂ ಸೈನಿಕರೇ ತಾವು ಈ ಪಾಪ ಕೃತ್ಯಕ್ಕೆ ಸಿದ್ಧರಿಲ್ಲವೆಂದು ಘೋಷಿಸಿ ಸರಕಾರವನ್ನು ವಿರೋಧಿಸಲಾರಂಭಿಸಿದ್ದಾರೆ.

ಲೆಬನನ್‌ನಲ್ಲಿ ಭಯಾನಕ ವಾತವರಣ ಸೃಷ್ಟಿಗೊಂಡಿದೆ. ಅಮೇರಿಕನ್ ನಿರ್ಮಿತ ಮಾರಕಾಸ್ತ್ರಗಳ ಸುರಿಮಳೆಯನ್ನೇ ಇಸ್ರೇಲ್ ಲೆಬನನ್ ಮೇಲೆ ನಡೆಸಿದೆ. ಆಸ್ಪತ್ರೆ ಹಾಗು ಜನನಿಬಿಡ ಪ್ರದೇಶಗಳ ಮೇಲೆ ಬಾಂಬ್ ದಾಳಿ ಮಾಡಲಾಗುತ್ತಿದೆ. ಈಗಾಗಲೇ ಇದರಿಂದಾಗಿ ಸುಮಾರು 10,000 ಪ್ಯಾಲಸ್ಟೈನ್ ಜನತೆ ಕೊಲ್ಲಲ್ಪಟ್ಟಿದ್ದಾರೆ. ಇದರಲ್ಲಿ ಅರ್ಧಕ್ಕೂ ಹೆಚ್ಚು ಮಕ್ಕಳು. ಇಸ್ರೇಲಿ ಸೈನಿಕರು ಲೆಬನನ್ ರಾಜ್ಯಧಾನಿ ಬೈರೂತ್ ಮೇಲೆ ನಡೆಸಿದ ದಾಳಿಯುಲ್ಲಿ 9500 ರಷ್ಟು ನಾಗರಿಕರು ಸಾವಿಗೀಡಾಗಿದ್ದಾರೆ. 16,600 ರಷ್ಟು ಜನ ಗಾಯಗೊಂಡಿದ್ದಾರೆ. ಅರ್ಧ ಮಿಲಿಯದಷ್ಟು ಜನತೆ ಮನೆಮಠ ಕಳೆದುಕೊಂಡಿರುತ್ತಾರೆ.

ಇಸ್ರೇಲಿನ ಪ್ರಭಲ ಶಕ್ತಿಯನ್ನೆದುರಿಸಿ ಪಿ.ಎಲ್.ಓ. ಸೈನಿಕರು ಧೀಮಂತ ಹೋರಾಟ ನಡೆಸುತ್ತಿದ್ದಾರೆ. ಕೊನೆಯ ಹನಿ ರಕ್ತ ಇರುವವರೆಗೆ ತಾವು ತಮ್ಮ ತಾಯ್ನಾಡಿಗಾಗಿ ಕಾದಾಡುವುದಾಗಿ ಪಿ. ಎಲ್. ಓ. ಅಧ್ಯಕ್ಷರಾದ ಅರಾಫತ್ ಘೋಷಿಸಿದ್ದಾರೆ. ಇದೀಗ ಆರನೇ ಸಲ ಯುದ್ಧ ಸಾರಿರುವ ಇಸ್ರೇಲ್ ಪಿ.ಎಲ್.ಓ. ಸೈನಿಕರ ಗೆರಿಲ್ಲಾ ಯುದ್ಧ ತಂತ್ರಗಳಿಂದಾಗಿ ಸಾಕಷ್ಟು ಹಾನಿ ಅನುಭವಿಸಿದೆ. ಪಿ ಎಲ್.ಓ ಸೈನಿಕರು ಲೆಬನಾನ್ ದೇಶಾಭಿಮಾನಿ ಶಕ್ತಿಗಳ ನೆರವಿನೊಂದಿಗೆ ಸೇರಿ ಧೈರ್ಯ, ಶೌರ್ಯ, ಹಾಗೂ ಬದ್ಧತೆಯ ಹೊಸ ಅಧ್ಯಾಯವನ್ನೇ ಬರೆದಿದ್ದಾರೆ. ವಿಮಾನ ಬಲದ ನೆರವಿಲ್ಲದೆ, ಸಾಕಷ್ಟು ಸಂಖ್ಯೆಯಲ್ಲಿ ಸೈನಿಕರಿಲ್ಲದೆ ಇದ್ದಾಗ್ಯು ಇವರುಗಳು ಆಕ್ರಮಣಕಾರರಿಗೆ ತಕ್ಕ ಪಾಠ ಕಲಿಸಲಾರಂಭಿಸಿದ್ದಾರೆ.

ಕಳೆದ ಕೆಲವಾರು ವರ್ಷಗಳಿಂದ ಲೆಬನನ್ ಮೇಲೆ ಅಮೇರಿಕಾದ ದೃಷ್ಟಿ ಕೇಂದ್ರೀಕೃತವಾಗಿದೆ. 1948ರ ಮೊದಲ ಪ್ಯಾಲಸ್ಟೈನ್ ಯುದ್ಧದ ನಂತರ ಮೂರು ಲಕ್ಷಕ್ಕೂ ಹೆಚ್ಚು ಪ್ಯಾಲಸ್ಟೈನ್ ನಿರಾಶ್ರಿತರು ಲೆಬನನ್ ಪ್ರವೇಶಿಸಿದರು. ಪ್ಯಾಲಸ್ಟೈನ್‌ನ ಶಸ್ತ್ರಸಜ್ಜಿತ ಸೈನ್ಯದಳವೂ ಅಲ್ಲೇ ತಳವೂರಿತು. ಇದು ಇಸ್ರೇಲಿಗೆ ಸರಿ ಬೀಳಲಿಲ್ಲ. ಅಮೇರಿಕಾದ ಕಣ್ಣೂ ಕೆಂಪಾಯಿತು. ಆದರೆ ಸಿರಿಯಾ ಹಾಗೂ ಲೆಬನನ್ ಪಿ.ಎಲ್.ಓ.ವನ್ನು ಬೆಂಬಲಿಸಿ ಪ್ಯಾಲಸ್ಟೈನ್‌ರಿಗೆ ತಮ್ಮದೇ ರಾಷ್ಟ್ರವನ್ನು ಹೊಂದುವ ಬೇಡಿಕೆಗೆ ಬೆಂಬಲ ಸೂಚಿಸಿದವು. ಪಿ.ಎಲ್.ಓ. ವನ್ನು ಕೊನೆಗೊಳಿಸಿ ಲೆಬನನ್‌ನ್ನು ಅಮೇರಿಕಾದ ಮೇಲಾಳ್ತನದ ಅಡಿಯಲ್ಲಿ ಬರುವಂತೆ ಮಾಡುವ ಸಂಚನ್ನು ಇಸ್ರೇಲ್ ಹಾಗೂ ಅಮೇರಿಕಾ ಜೊತೆ ಸೇರಿ ನಡೆಸಿದವು. ಆದರೆ ಆ ಸಂಚು ಯಶಸ್ವಿಯಾಗಲಿಲ್ಲ. ಅದರ ಪರಿಣಾಮವೇ ಈಗಿನ ದಾಳಿ.

ಚರಿತ್ರೆ :

ಅರಬ್–ಇಸ್ರೇಲ್ ಯುದ್ಧಕ್ಕೆ ಕಾರಣವಾದ ಚರಿತ್ರೆಯಿದೆ. 1897 ರಷ್ಟು ಹಿಂದೆಯೇ ಬಾಸ್ಲಿ ಸಮಾವೇಶದಲ್ಲಿ ಬಹುತೇಕ ಅರಬರಿಂದಲೇ ಕೂಡಿದ್ದ ಪ್ಯಾಲಸ್ಟೈನ್‌ನಲ್ಲಿ ಯಹೂದಿಯರ ಆವಾಸಸ್ಥಾನವನ್ನು ಸ್ಥಾಪಿಸಲು ಕುಲವಾದಿಗಳು ಆಶಯ ವ್ಯಕ್ತಪಡಿಸಿದರು. "ಭೂಮಿ ಇಲ್ಲದ ಜನರನ್ನು ಜನರಿಲ್ಲದ ಭೂಮಿಗೆ ತರುವುದಕ್ಕಾಗಿ" ತಾವು ಚಳುವಳಿ ಆರಂಭಿಸಿರುವುದಾಗಿ ಅವರು ಹೇಳಿದರು. ಆದರೆ ಈ ಹೇಳಿಕೆ ಅವಾಸ್ತವವಾದದ್ದು. ಅರಬ್ ಜನಾಂಗವೇ ಅಲ್ಲಿ ವಾಸವಾಗಿದ್ದರು. 1919ರಲ್ಲಿ ಪ್ಯಾಲಸ್ಟೈನ್‌ನಲ್ಲಿ 57,000 ಯಹೂದಿಯರು ವಾಸವಾಗಿದ್ದರೆ, 533,000 ರಷ್ಟು (ಶೇ.90.3) ಅರಬರು ಅಲ್ಲಿ ಜೀವಿಸುತ್ತಿದ್ದರು. 1930ರ ನಂತರ ಅಂದರೆ ಇಸ್ರೇಲ್ ಸ್ಥಾಪಿಸಲ್ಪಟ್ಟ ನಂತರ ಯಹೂದಿಯರ ವಲಸೆ ಆರಂಭವಾಯಿತು. ವಲಸೆಯ ಪರಿಣಾಮವಾಗಿ ಯಹೂದಿಯರ ಮತ್ತು ಅರಬರ ನಿಷ್ಪತ್ತಿ ಬದಲಾಯಿತು. ಯಹೂದಿಯರ ಪ್ರವೇಶದಿಂದಾಗಿ ಅರಬರಿಗೆ ಸಂಕಷ್ಟಗಳು ಹೆಚ್ಚಾದವು. ಪರಿಣಾಮವಾಗಿ 1947ರ ವೇಳೆಗೆ ಅರಬರೇ ತಮ್ಮ ನಾಡಿನಿಂದ ವಲಸೆ ಹೋಗಬೇಕಾದ ಸ್ಥಿತಿ ಒದಗಿಬಂತು. 1947, ನವೆಂಬರ್ 29 ರಂದು ವಿಶ್ವರಾಷ್ಟ್ರ ಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ಈ ಬಗ್ಗೆ ಚರ್ಚೆಯಾಗಿ ಪ್ಯಾಲಸ್ಟೈನ್‌ನನ್ನು ಇಬ್ಭಾಗಗೊಳಿಸುವ ಬಗ್ಗೆ ನಿರ್ಣಯ ಅಂಗೀಕಾರವಾಯಿತು. ಆದರೆ ನಿರ್ಣಯ ಜಾರಿಯಾಗಲಿಲ್ಲ. ಪ್ಯಾಲೆಸ್ಟೈನಿನಾದ್ಯಂತ ಸಶಸ್ತ್ರದಂಗೆ ನಡೆಯಿತು.

1948ರಲ್ಲಿ ಅರಬರ ಮೇಲೆ ಕುಲವಾದಿಗಳ (ಜಿಯೋನಿಸ್ಟರ) ದಾಳಿ ಆರಂಭವಾಯಿತು. ನರಹತ್ಯೆ ಭೀಕರವಾಯಿತು. ಏಪ್ರಿಲ್ 9, 10 ರಂದು ಜೆರುಸಲೇಮ್ ಪಕ್ಕದ ಅರಬರ ಹಳ್ಳಿಯೊಂದರಲ್ಲಿ ಭೀಕರ ಹತ್ಯಾಕಾಂಡವೊಂದು ನಡೆದು ಸುಮಾರು 250 ರಷ್ಟು ಅರಬ್ ಮಹಿಳೆಯರು,ಮಕ್ಕಳು ವಧಿಸಲ್ಪಟ್ಟರು. 1948ರಲ್ಲಿ ಇಸ್ರೇಲ್ ರಾಷ್ಟ್ರವಾಗಿ ಘೋಷಿಸಲ್ಪಟ್ಟ ನಂತರ ಅಲ್ಲಿಂದ 400,000 ಅರಬರನ್ನು ಹೊಡೆದೋಡಿಸಲಾಯಿತು. 1948–49ರ ಮೊದಲ ಪ್ಯಾಲಸ್ಟೈನ್ ಯುದ್ಧದಲ್ಲಿ ಮತ್ತೆ 340,000 ಅರಬರು ನಿರಾಶ್ರಿತರಾದರು. "ಯಹೂದಿ ರಾಷ್ಟ್ರ" ಕಟ್ಟುವೆವೆಂದು ಹೊರಟ ಜಿಯೋನಿಸ್ಟ್ ಮತಾಂಧರು ಅರಬರ ಸರ್ವನಾಶಕ್ಕೆ ಯೋಜಿತವಾದ ಸಂಘಟಿತ ಪ್ರಯತ್ನ ಮಾಡಿದರು. ಯಾವ ಭದ್ರತೆಯ ಭರವಸೆಯೂ ಉಳಿಯದ ಅಸಹಾಯಕ ಅರಬರು ತಾಯ್ನಾಡನ್ನು ತೊರೆಯಲಾರಂಭಿಸಿದರು. ಹೊರತಳ್ಳಲ್ಪಟ್ಟ ಬಹುತೇಕ ಪ್ಯಾಲೆಸ್ಟೈನಿಯರು ಈಜಿಪ್ಟ್ ಆಳ್ವಿಕೆಯಲ್ಲಿದ್ದ ಟ್ರಾನ್ಸ್ ಜೋರ್ಡನ್ ಮತ್ತು ಗಾಝುಸ್ಟ್ರಿಪ್‌ನಲ್ಲಿ ಆಶ್ರಯ ಪಡೆದರು. ನೂರಾರು ಸಾವಿರ ಜನ ಲೆಬನನ್ ಮತ್ತು ಸಿರಿಯಾದಲ್ಲಿ ನೆಲೆಯೂರಿದರು. ಕೆಲವರು ಇರಾಕ್‌ನಲ್ಲಿ ಆಶ್ರಿತರಾದರು. ಅರಬರಿಗೆ ಅವರದೇ ಆದ ತಾಯ್ನಾಡನ್ನು ಒದಗಿಸುವ ಬಗ್ಗೆ, ಅವರುಗಳು ಅನುಭವಿಸಿದ ಅಪಾರ ನಷ್ಟವನ್ನು ತುಂಬಿಕೊಡುವ ಬಗ್ಗೆ ಡಜನ್ನಿನಷ್ಟು ನಿರ್ಣಯಗಳನ್ನು ವಿಶ್ವಸಂಸ್ಥೆ ಅಂಗೀಕರಿಸಿತು. ಆದರೆ ಈ ಎಲ್ಲಾ ನಿರ್ಣಯಗಳನ್ನು ಇಸ್ರೇಲ್ ತಿರಸ್ಕರಿಸಿತು. ಪರಿಣಾಮವಾಗಿ 1967 ರಲ್ಲಿ ಭೀಕರ ಯುದ್ಧ ಸ್ಫೋಟಗೊಂಡಿತು. 6 ದಿನ ನಡೆದ ಯುದ್ಧ ಪ್ಯಾಲಸ್ಟೈನ್ ಅರಬರಿಗೆ ಮತ್ತಷ್ಟೂ ಹಾನಿ ಮಾಡಿತು. ಮತ್ತೆ ಸಾವಿರಾರು ಜನ ನಿರಾಶ್ರಿತರಾದರು. ಈ ಸಲ ಜೋರ್ಡನ್‌ನಿಂದ ಜೆರುಸಲೇಮ್‌ಗೆ, ಮತ್ತಿತರ ಕಡೆಗೆ ಹೋಗಬೇಕಾಯಿತು. 1968ರವರೆಗೆ ಪ್ಯಾಲೆಸ್ಟೈನ್ ಅರಬರನ್ನು ಹೊರತಳ್ಳುವ ಕೆಲಸ ಮುಂದುವರಿಯಿತು. 1968ರ ನಂತರ ಅರಬ್ ಬುದ್ಧಿ ಜೀವಿಗಳನ್ನು ರಾತೋರಾತ್ರಿ ಅವರ ಮನೆಗಳಿಗೆ ಬಂದು ಗುಂಡು, ಲಾಠಿಯಿಂದ ಬೆದರಿಸಿ ಬಲತ್ಕಾರವಾಗಿ ಹೊರತಳ್ಳಲಾಯಿತು. ಹೀಗೆ ಹೊರತಳ್ಳಲ್ಪಟ್ಟವರಲ್ಲಿ ಹೆಚ್ಚಿನವರು ಪ್ಯಾಲಸ್ಟೈನ್ ಮುಖಂಡರುಗಳು,ಮೇಯರುಗಳು, ಲಾಯರುಗಳು, ಇಂಜಿನಿಯರ್‌ಗಳು ಮತ್ತು ಬುದ್ಧಿಜೀವಿಗಳು. 1971 ರಲ್ಲಿ ಪ್ಯಾಲಸ್ಟೈನ್ ನಿರಾಶ್ರಿತರ ವಿಶ್ವಸಂಸ್ಥೆಯ ಪರಿಹಾರ ಸಂಸ್ಥೆಯ ರೀತ್ಯ 1,425,000 ಪ್ಯಾಲಸ್ಟೈನ್ ನಿರಾಶ್ರಿತರು ತಮ್ಮದೇ ಆದ ರಾಷ್ಟ್ರವಿಲ್ಲದೆ ವಿವಿದೆಡೆಗಳಲ್ಲಿ ಜೀವಿಸುತ್ತಿದ್ದಾರೆ. ಈಗ ಅವರುಗಳನ್ನು ಲೆಬನನ್‌ನಲ್ಲಿ ದೈಹಿಕವಾಗಿ ಇಲ್ಲವಾಗಿಸಲಾಗುತ್ತಿದೆ. ಹಿಟ್ಲರನ ಅಮಾನುಷ ಹಿಂಸಾಚಾರದ ನಂತರ ಜಗತ್ತು ಅಷ್ಟೇ ಭೀಕರವಾದ ಮಾನಸಿಕ ಹಾಗು ದೈಹಿಕ ಹಿಂಸಾಚಾರವನ್ನು ಪ್ಯಾಲೆಸ್ಟೈನ್ ಜನತೆ ಇಂದು ಅನುಭವಿಸುತ್ತಿರುವುದನ್ನು ಕಾಣುತ್ತಿದೆ.

ರಕ್ತದೋಕುಳಿ :

"....ಸುಂದರವಾದ ಸಮುದ್ರ ಕಿನಾರೆಗಳಿಂದ ಕೂಡಿದ್ದ ಬೈರೂತ್‌ನಗರ ಇಂದು ರಕ್ತಮಯವಾಗಿದೆ. ಬೈರೂತ್ ಸಾಯುತ್ತಿದೆ. ಅಮೇರಿಕದ ಮಾರಕಾಸ್ತ್ರಗಳನ್ನು ಉಪಯೋಗಿಸಿ ಇಸ್ರೇಲ್ ಸೈನಿಕರು ಲೆಬನನ್‌ನಲ್ಲಿ ನರಕ ಸೃಷ್ಟಿಸಿದ್ದಾರೆ. ಇಲ್ಲಿ ಈಗ ಮಹಿಳೆಯರ ಮಾನಭಂಗವಾಗುತ್ತಿದೆ, ನಾಗರಿಕರ ಮೇಲೆ ಬಾಂಬ್ ದಾಳಿ ನಡೆಯುತ್ತಿದೆ, ಯುವಜನಾಂಗವನ್ನು ಗುಂಡಿಕ್ಕಿ ಕೊಲ್ಲಲಾಗುತ್ತಿದೆ. ಈ ಬರ್ಭರತೆಯನ್ನು ನನ್ನಿಂದ ಮರೆಯಲು ಸಾಧ್ಯವಿಲ್ಲ. ಇಸ್ರೇಲ್ ಸೈನಿಕರು ಮತ್ತು ಅವರ ಜನರಲ್‌ಗಳು ಕೊಲೆಗಟುಕರು. ಧೀರ ಪ್ಯಾಲಸ್ಟೈನರು ಖಂಡಿತಾ ಗೆಲ್ಲುವರು. ಕೊಲೆಗಟುಕ ಇಸ್ರೇಲ್ ಜನತಾ ನ್ಯಾಯಾಲಯದೆದುರು ನಿಲ್ಲಲೇಬೇಕಾಗುತ್ತದೆ..." ಇದು ಜೂನ್ 24ರವರೆಗೆ ಬೇರೂತ್‌ನಲ್ಲಿದ್ದು ಅಲ್ಲಿನ ದಾರುಣತೆಯನ್ನು ಕಣ್ಣಾರೆ ಕಂಡ ಜಗತ್ತಿನ ಹೆಸರಾಂತ ಉರ್ದು ಕವಿ ಫೈಝು ಅಹಮ್ಮದ್ ಫೈಝು ಹೇಳಿದ ಮಾತುಗಳು.

ಕ್ಯಾಂಪ್ ಡೇವಿಡ್ ಒಪ್ಪಂದದ ನಾಟಕವಾಡಿ ಜಗತ್ತಿಗೆ ತಾನೊಬ್ಬ "ಶಾಂತಿಪ್ರಿಯ" ರಾಷ್ಟ್ರವೆಂದು ತೋರಿಸಲು ಪ್ರಯತ್ನಿಸಿದ ಸಾಮ್ರಾಜ್ಯಶಾಹಿ ಅಮೇರಿಕ ಇಂದು ಇಡೀ ಜಗತ್ತಿನಲ್ಲಿ ವಿಮೋಚನಾವಾದಿ ಚಳುವಳಿಯ ಪ್ರಥಮ ವೈರಿಯಾಗಿದೆ. ಆದ್ದರಿಂದಲೇ ಇದು ಪ್ಯಾಲಸ್ಟೈನ್ ವಿಮೋಚನಾ ಸಂಘಟನೆಯನ್ನು ಧ್ವಂಸಗೊಳಿಸಲು ಇಸ್ರೇಲಿಗೆ ಸಂಪೂರ್ಣಬೆಂಬಲ ನೀಡುತ್ತಿದೆ.

(7ನೇ ಪುಟ ನೋಡಿ)

ಲೆಬನನ್ ಮೇಲಿನ ಇಸ್ರೇಲ್ ದಾಳಿಗೆ ಧಿಕ್ಕಾರ
ಮುಂಬೈಯಲ್ಲಿ ಪ್ರತಿಭಟನಾ ಪ್ರದರ್ಶನ

ಜೂನ್ 22 ರಂದು ಬೊಂಬಾಯಿಯಲ್ಲಿರುವ ಅಮೇರಿಕಾದ ಸಾಂಸ್ಕೃತಿಕ ಕೇಂದ್ರ ಮತ್ತು ಜನನಿಬಿಡ ಪ್ರದೇಶವಾದ ಚರ್ಚ್‌ಗೇಟ್ ಬಳಿ ಇರುವ ಗ್ರಂಥಾಲಯದ ಬಳಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಬೊಂಬೈ ಸಮಿತಿಯು ದೊಡ್ಡ ಪ್ರತಿಭಟನಾ ಸಭೆಯನ್ನು ಏರ್ಪಡಿಸಿತ್ತು. ಈ ಸಭೆಯಲ್ಲಿ ಪ್ಯಾಲಸ್ಟೈನ್ ವಿಮೋಚನಾ ಸಂಘಟನೆಯನ್ನು ನಾಶಗೊಳಿಸುವ ಉದ್ದೇಶದಿಂದ ಲೆಬನನ್ ಮೇಲೆ ಆಕ್ರಮಣ ಮಾಡಿರುವ ಇಸ್ರೇಲನ್ನು ಹಾಗು ಈ ಜನಾಂಗ ಹತ್ಯೆಗೆ ಬೆಂಬಲ ನೀಡುತ್ತಿರುವ ಸಾಮ್ರಾಜ್ಯಶಾಹಿ ಅಮೇರಿಕವನ್ನು ಖಂಡಿಸಲಾಯಿತು. ನಂತರ ಕಾರ್ಯದರ್ಶಿ ಎ. ಬಿ. ಸಾವಂತ್‌ರವರ ನೇತೃತ್ವದ ನಿಯೋಗವು ಕೇಂದ್ರ ನಿರ್ದೇಶಕರನ್ನು ಭೇಟಿಮಾಡಿ ಖಾರ ಮಾತುಗಳಿಂದ ಬರೆದ ಮನವಿ ಪತ್ರವನ್ನು ಸಲ್ಲಿಸಿ ಆಕ್ರಮಣವನ್ನು ಕೂಡಲೇ ನಿಲ್ಲಿಸುವಂತೆ ಒತ್ತಾಯಿಸಿತು. ಮತ್ತು ನ್ಯಾಯಕ್ಕಾಗಿ ಹೋರಾಡುತ್ತಿರುವ ಪ್ಯಾಲಸ್ಟೈನ್ ಜನತೆ ಮತ್ತು ಪಿ. ಎಲ್. ಓ. ಕ್ಕೆ ಸೌಹಾರ್ದ ಬೆಂಬಲ ಸೂಚಿಸಲಾಯಿತು. ಜೂನ್ 28 ರಂದು ಉತ್ತರ ಪ್ರದೇಶದ ಮೈನ್‌ಪುರಿ ಜಿಲ್ಲಾ ಸಿ. ಪಿ. ಐ. (ಎಂ) ಸಮಿತಿಯು ಸಾರ್ವಜನಿಕ ಸಭೆಯೊಂದನ್ನು ನಡೆಸಿ ಇಸ್ರೇಲ್ ದಾಳಿಯನ್ನು ಖಂಡಿಸಿತು.

ಎ. ಕೆ. ಗೋಪಾಲನ್ ಆತ್ಮಕಥೆ

(3ನೇ ಪುಟದಿಂದ)

ದೇಶದ ಎಷ್ಟೋ ಕಡೆ ಜನತೆಯ ರಾಜಕೀಯ ಪ್ರಜ್ಞೆ ತೀವ್ರಗತಿಯಲ್ಲಿ ಬೆಳೆಯುತ್ತ ಬಂದಂತೆ (ಎ.ಕೆ.ಜಿ. ಅವರಂಥ ತ್ಯಾಗಜೀವಿ, ನಿಷ್ಠಾವಂತ, ಪ್ರಗತಿಪರರು ಜೀವತೇಯ್ದು ಬೆಳೆಸುತ್ತ ಬಂದಂತೆ) ಹೋರಾಟಗಳೂ ತೀವ್ರಗೊಂಡವು. ಹಲವು ಹತ್ತು ದಾರಿಗಳೂ ಮೂಡಿ ಬಂದವು. ರಾಷ್ಟ್ರೀಯ ರಾಜಕೀಯ ಪಥದಲ್ಲಿ ಜನಸೇವೆಗಾಗಿ ತನ್ನನ್ನು ಸಂಪೂರ್ಣ ತೊಡಗಿಸಿಕೊಂಡ ("ಒಂದು ಮುಷ್ಕರವು ಆರಂಭಿಸಿದೆಯೆಂದು ತಿಳಿದೊಡನೆ ನಾನು ಅಲ್ಲಿಗೆ ಧಾವಿಸುತ್ತಿದ್ದೆ. ಮುಷ್ಕರ ಮುಗಿದೊಡನೆ ನಾನು ಬೇರೆಡೆಗೆ ಹೋಗುತ್ತಿದ್ದೆ" -123) ನಿಷ್ಠಾವಂತ, ಪ್ರಾಮಾಣಿಕ ಕಾರ್ಯಕರ್ತರು ಕಮ್ಯುನಿಸ್ಟರು ಮಾತ್ರ ಆಗಬಲ್ಲರೆಂಬುದನ್ನು ಎ.ಕೆ.ಜಿ. ಜೀವನ ಕಥೆ ಸ್ಪಷ್ಟಪಡಿಸುತ್ತದೆ. ಎ. ಕೆ. ಜಿ. ಅನುಭವಗಳು, ಅಭ್ಯಾಸ, ಪರಾಮರ್ಶ, ವಿಮರ್ಶೆಗಳ ಮೂಲಕ 'ನಿಜವಾದ ದಾರಿ'ಯನ್ನು ಅರಸುತ್ತ ನಿಷ್ಠಾವಂತ ಕಮ್ಯುನಿಸ್ಟರಾಗಿ ರೂಪಗೊಂಡರು.

ಕ್ರಾಂತಿಕಾರಿ ಚರಿತ್ರೆಯ ಒಂದು ಭಾಗವಾಗಿರುವ ಎ.ಕೆ.ಜಿ. ಅವರ ಜೀವನ ಹೋರಾಟದ ಕಥೆ ಒಂದು ಅಭ್ಯಸನೀಯ, ಚೈತನ್ಯದಾಯಕವಾದ, ಸ್ಫೂರ್ತಿಯುತವಾದ ಕೃತಿ. ಮಾನವತಾ ಪ್ರೇಮಿಯಾಗಿರುವ ಯಾವ ಓದುಗನೂ ಗದ್ಗದ ಕಂಠದಿಂದಲ್ಲದೆ ಈ ಕೃತಿಯ ಹಲವು ಭಾಗಗಳನ್ನು ಓದಲಾರ (ಒಕ್ಕಲೆಬ್ಬಿಸುವದರ ವಿರುದ್ಧ ವಿದೇಶಗಳಿಗೆ—ಇತ್ಯಾದಿ). ಎ. ಕೆ. ಜಿ. ಹೋರಾಟಗಳ ಪ್ರಾಮಾಣಿಕ, ನಿರೂಪಣೆಗಳ ಒಳಗಡೆ, ಓದುಗನನ್ನು ತೀವ್ರವಾಗಿ ಸೆಳೆಯುವ, ಜನತೆಯ ಸಲುವಾಗಿ ಜೀವತೇಯ್ದ ಈ ಕಷ್ಟಸಹಿಷ್ಣುಗೆ ಕೃತಜ್ಞನಾಗಿರುವ ಭಾವನೆ ಬರುತ್ತದೆ.

ಎ.ಕೆ.ಜಿ. ನಡೆಸಿದ ಅಸಂಖ್ಯ ಉಪವಾಸ ಸತ್ಯಾಗ್ರಹಗಳು, ಕಾಲ್ನಡಿಗೆ ಜಾಥಾಗಳು, ಪಿಕೆಟಿಂಗ್‌ಗಳು, ಮುಷ್ಕರಗಳು, ಧರಣಿಗಳು, ಭಾಷಣಗಳು, ಜೇಲುವಾಸ (328 ಪುಟ ನೋಡಿ), ಚುನಾವಣೆಗಳು, ಸಾಮೂಹಿಕ ಹೋರಾಟಗಳು, ಬಂಧನಗಳು, ಭೂಗತ ಜೀವನಗಳು, ಇವೆಲ್ಲ ಅವರೊಬ್ಬ ಮಹಾನ್ ಕ್ರಾಂತಿಕಾರಿಯಾಗಿರುವದರ ಆದರ್ಶಪ್ರಾಯ ದಾಖಲೆಗಳು. ಹೀಗಾಗಿ ಭಾರತದ ಕ್ರಾಂತಿ ಚರಿತ್ರೆಯಲ್ಲಿ ಎ. ಕೆ. ಜಿ. ಅವರು ಅಚ್ಚಳಿಯದ ಸ್ಥಾನ ಪಡೆದಿದ್ದಾರೆ. ಭೂಮಾಲಿಕ ಬಂಡವಾಳಶಾಹಿ ವ್ಯವಸ್ಥೆಯ ಭಾರತದ ಸುದೀರ್ಘವಾದ ದಾರುಣ ಜೀವನ ಕಥೆಯಲ್ಲಿ, ಪ್ರಜಾಸತ್ತೆ ಉಳಿವಿಗೆ, ದುಡಿವ ಜನತೆಯ ಅಖಂಡ ನ್ಯಾಯಕ್ಕೆ, ಪ್ರಾಣವನ್ನು ಪಣವಾಗಿಟ್ಟು ದುಡಿದ ಎ. ಕೆ. ಜಿ. ಆ ಚಳುವಳಿಗಳ ಮುಖ್ಯ ಜೀವವಾದರು, ಭಾಗವಾದರು. ಹಳ್ಳಿಗಳಿಂದ ತುಂಬಿದ ಭಾರತದಲ್ಲಿ ಪ್ರತಿಯೊಂದು ಹಳ್ಳಿಯೂ ದ್ವೀಪದಂತೆ ಇದ್ದು, ಅಸಂಖ್ಯ ಸಮಸ್ಯೆಗಳ ಕಗ್ಗಂಟುಗಳಾಗಿವೆ. ಇದು ಶೋಷಕ ವ್ಯವಸ್ಥೆಯ ಅನಿವಾರ್ಯ ಫಲ. ಹಳ್ಳಿಗಳ ಅಸಂಘಟಿತ ಜನತೆಯ ಮಧ್ಯೆ ಅನೇಕ ಪ್ರತಿಗಾಮಿ ಶಕ್ತಿ, ವಿಚಾರಗಳ ಮಧ್ಯೆ ಪ್ರಗತಿಪರರು ಕೆಲಸ ಮಾಡುವದು, ಸಾಹಸವಾಗಿದ್ದಾಗಲೂ ಎ. ಕೆ. ಜಿ. ದೊಡ್ಡ ಮಾರ್ಗ ಕ್ರಮಿಸುತ್ತ ಕ್ರಾಂತಿಯ ಹೆದ್ದಾರಿ ನಿರ್ಮಿಸಿದರು. ಯಾವ ಕಮ್ಯುನಿಸ್ಟನು ತನ್ನ ಪಕ್ಷದ ಅಂಗವೇ ಆಗಿರುತ್ತಾನೆ, ಅವನ ಸಾಧನೆ ಪಕ್ಷದ ಸಾಧನೆ. ಈ ದೃಷ್ಟಿಯಿಂದ, ತನ್ನ ಸಾಧನೆ, ಸಿ.ಪಿ.ಐ.(ಎಂ) ಸಾಧನೆ ಎಂದು ಹಲವು ಹತ್ತು ಸಲ ಎ. ಕೆ. ಜಿ. ತಮ್ಮ ಜೀವನ ಚರಿತ್ರೆಯಲ್ಲಿ ಹೇಳಿದ್ದಾರೆ.

ಅವರ ಆತ್ಮಕಥೆ ಈ ಮಾತುಗಳಿಂದ ಮುಗಿಯುತ್ತದೆ — "ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯಕ್ಕಾಗಿಯೂ ಶೋಷಣೆಯ ವಿರುದ್ಧವು ನಾಲ್ಕು ದಶಕಗಳಿಂದಲೂ ಹೆಚ್ಚು ಕಾಲ ನಾನು ಜನತೆಯ ಹೋರಾಟಗಳಲ್ಲಿ ಭಾಗವಹಿಸಿದ್ದೇನೆ. ಅವುಗಳ ಮೂಲಕ ನನ್ನ ವ್ಯಕ್ತಿತ್ವ ರೂಪಗೊಂಡಿದೆ. 1920ರ ದಶಕದಲ್ಲಿ ನಾನು ಸ್ವಾತಂತ್ರ್ಯ ಹೋರಾಟಕ್ಕೆ ಸೇರಿದಂದಿನಿಂದ ಈ ಧ್ಯೇಯಗಳನ್ನು ನನ್ನ ಜೀವನದ ಅಂಗವಾಗಿ ಅಳವಡಿಸಿಕೊಂಡು ಬಂದಿದ್ದೇನೆ. ಅಂದಿನಿಂದಲೂ ಸಮಾಜವಾದಕ್ಕಾಗಿ ನಡೆಸುವ ಹೋರಾಟಕ್ಕೆ ನನ್ನನ್ನು ನಾನು ಅರ್ಪಿಸಿಕೊಂಡಿದ್ದೇನೆ. ಸಾಮಾನ್ಯ ಜನರ ಜತೆ ಸೇರಿ ಹೋರಾಟ ನಡೆಸಿ, ಅವರಿಂದ ನಾನು ಕಲಿತುಕೊಂಡ ಅನುಭವಗಳು ನನಗೆ ಮುಂದೆ ಸಾಗಲು ಸ್ಫೂರ್ತಿ ನೀಡಿವೆ. ನನ್ನ ಜೀವನದ ಕಥೆಯು ನನ್ನ ದೇಶದ ಮಿಲಿಯಗಟ್ಟಲೆ ಜನರ ಚರಿತ್ರೆಯ ಒಂದು ಭಾಗವಾಗಿದೆ. ನನ್ನ ದೇಶದ ಜನರು ಒಂದು ದಿನ ಖಂಡಿತವಾಗಿಯೂ ಕ್ರಾಂತಿ ಮತ್ತು ಸಮಾಜವಾದದ ಹಾದಿಯಲ್ಲಿ ಮುಂದುವರಿದು ಯಶಸ್ಸನ್ನು ಗಳಿಸುವರೆಂಬ ಭರವಸೆ ನನಗಿದೆ." (386 ಪುಟ)

ತುರ್ತುಪರಿಸ್ಥಿತಿಯಲ್ಲಿ ಎ. ಕೆ. ಜಿ. ಅವರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣ ಉದ್ಬೋಧಕವಾಗಿದೆ. ಬೂರ್ಷ್ವಾ ಆಳುವ ವರ್ಗದ ದುರಂತವನ್ನು ಎತ್ತಿ ತೋರಿಸುತ್ತಿದೆ.

ಹಿಂಬದಿಯ ಹೊದಿಕೆಯ (ಬ್ಲರ್ಬ) ಕೆಲ ಮಾತುಗಳನ್ನು ಗಮನಿಸಬೇಕು—

"ಅವರ ಆತ್ಮಕಥೆ ಮಾನವ ಜೀವಿತದ ಸಾರ್ಥಕತೆಯ ಚಿತ್ರ."

"ನಮಗಿರುವುದು ಒಂದೇ ಬದುಕು. ಈ ಬದುಕಿನ ಕಾಲವನ್ನು ಜಗತ್ತಿನ ಅತ್ಯಂತ ಶ್ರೇಷ್ಠ ಕಾರ್ಯ—ದಬ್ಬಾಳಿಕೆಗೊಳಗಾದವರನ್ನು, ಶೋಷಿತರನ್ನು ಗುಲಾಮಗಿರಿಯಲ್ಲಿ ತೊಳಲುತ್ತಿರುವವರನ್ನು ಸ್ವತಂತ್ರಗೊಳಿಸಿ ಬಿಡುಗಡೆ ಮಾಡಿ, ಮೇಲೆತ್ತುವ ಶ್ರೇಷ್ಠ ಕಾರ್ಯದಲ್ಲಿ ತೊಡಗಿಸಿದಾಗಲೆ ಆ ಬದುಕು ಸಾರ್ಥಕ ಎಂದು ಕ್ರಾಂತಿಯ ನಾಯಕ ಲೆನಿನ್ ನುಡಿದ ಮಾತುಗಳನ್ನು ತನ್ನ ಬದುಕಿನಲ್ಲಿ ಸಾರ್ಥಕಗೊಳಿಸಿದ ವ್ಯಕ್ತಿ ಎ. ಕೆ. ಗೋಪಾಲನ್."

"ಭಾರತದ ಕ್ರಾಂತಿಕಾರಿ ಚರಿತ್ರೆಯ ಜ್ವಲಂತ ಅಧ್ಯಾಯ—ಎ.ಕೆ.ಜಿ."

●

ಪ್ರಾಂತ ರೈತ ಸಂಘದಿಂದ

ರೈತರ-ಕೂಲಿಕಾರರ ಐಕ್ಯ ಹೋರಾಟಕ್ಕೆ ಸಹಕರಿಸಲು ಕರೆ

1980 ರಿಂದೀಚೆ ರಾಜ್ಯದಲ್ಲಿ ತೀವ್ರ ರೈತ ಹೋರಾಟ ಬೆಳೆಯುತ್ತ ಬಂದಿದೆ. ಕೃಷಿ ಹುಟ್ಟುವಳಿಗಳ ಬೆಲೆ ತೀರ ಕೆಳಕ್ಕೆ ಕುಸಿದು ತೀವ್ರ ಕೃಷಿಬಿಕ್ಕಟ್ಟು ಮೂಡಿ ಬಂದ ಹಿನ್ನೆಲೆಯಲ್ಲಿ ರೈತರು ಸ್ವಯಂ ಪ್ರೇರಿತ ರೀತಿಯಲ್ಲಿ ಹೋರಾಟಕ್ಕಿಳಿಯುವಂತಾಗಿದೆ.

ಬೆಳೆದು ಬಂದಿರುವ ಈ ಹೋರಾಟಕ್ಕೆ ಅತ್ಯಂತ ವಿಶಾಲ ಐಕ್ಯ ಸ್ವರೂಪವನ್ನು ನೀಡಬೇಕಾಗಿದೆ. ಸುಸಂಘಟಿತ ಹೋರಾಟವನ್ನಾಗಿ ಪರಿವರ್ತಿಸಬೇಕಾಗಿದೆ. ಈ ದಿಸೆಯಲ್ಲಿ ರೈತರು ಎದುರಿಸುವ ಸಮಸ್ಯೆಗಳ ಕುರಿತು ತಿಳುವಳಿಕೆ ನೀಡಬೇಕಾಗಿದೆ. ಕರ್ನಾಟಕ ಪ್ರಾಂತ ರೈತ ಸಂಘ ಅತ್ಯಂತ ಕಾಳಜಿಯಿಂದ ಐಕ್ಯ, ಬಲಿಷ್ಠ ಹೋರಾಟ ಕಟ್ಟಲು ಮುತುವರ್ಜಿ ವಹಿಸುತ್ತ ಬಂದಿದೆ. ಕೃಷಿ ಉತ್ಪತ್ತಿಗಳಿಗಾಗಿ ಯೋಗ್ಯ ಲಾಭದಾಯಕ ಬೆಲೆ ಏರಿಕೆಗಾಗಿ ಹೋರಾಡುವುದರ ಜೊತೆಗೇ, ಕೃಷಿ ಕೂಲಿಕಾರರ, ಬಡರೈತರ ಸಮಸ್ಯೆಗಳಿಗೆ ಒತ್ತು ಕೊಟ್ಟು, ಹೋರಾಟ ನಡೆಸುವ ಕ್ರಮ ಅನುಸರಿಸುತ್ತಿದೆ.

ರೈತರನ್ನು ತಪ್ಪು ಹಾದಿಗೆ ಎಳೆಯುವ ಪ್ರಯತ್ನ ಕೂಡಾ ರಾಜ್ಯದಲ್ಲಿ ನಡೆದಿದೆ. ರಾಜ್ಯ ರೈತರ ಹೋರಾಟ ರಾಜಕೀಯ ರಹಿತ ಇರಬೇಕೆಂಬ ತಪ್ಪು ತಿಳುವಳಿಕೆಯನ್ನು ರೈತರಲ್ಲಿ ಪ್ರಸಾರ ಮಾಡಲಾಗುತ್ತಿದೆ. ಚಳುವಳಿ ಪಕ್ಷಾತೀತವಾಗಿ ನಡೆಯಬೇಕಲ್ಲದೇ ರಾಜಕೀಯ ರಹಿತವಾಗಿ ಅಲ್ಲ. 35 ವರ್ಷಗಳಿಂದ ಬಂಡವಾಳಶಾಹಿ ಪರ ಆರ್ಥಿಕ ನೀತಿಯಿಂದಾಗಿ ರೈತರ ಸಮಸ್ಯೆಗಳು

(8ನೇ ಪುಟ ನೋಡಿ)

ಪಿ. ಎಲ್. ಓ. ಹೋರಾಟ

(6ನೇ ಪುಟನೋಡಿ)

ಜಗತ್ತಿನ ಎಲ್ಲಾ ರಾಷ್ಟ್ರಗಳು ಒಕ್ಕೊರಲಿನಿಂದ ಅಮೇರಿಕಾ ಮತ್ತು ಇಸ್ರೇಲಿನ ಈ ಮಾನವ ವಿರೋಧಿ ಧೋರಣೆಯನ್ನು ಖಂಡಿಸಿರುವುದು ಸ್ವಾಗತಾರ್ಹ ವಿಚಾರ.

ಪಿ.ಎಲ್.ಓ ಗೆ ಹಾಗು ಲೆಬನನ್‌ನ ಜನತೆಗೆ ನಾವು ನೀಡುವ ಬೆಂಬಲ ಮಾನವತೆಯ ಉಳಿವಿಗೆ, ವಿಮೋಚನಾವಾದಿ ಹೋರಾಟಕ್ಕೆ ನೀಡುವ ಬೆಂಬಲವಾಗಿದೆ. ಜೀವವನ್ನು ಮುಡಿಪಾಗಿಟ್ಟು ಕಾಯ್ನಾಡಿಗಾಗಿ ಧಿಟ್ಟತನದಿಂದ ಹೋರಾಡುತ್ತಿರುವ ಪಿ. ಎಲ್. ಓ. ಯೋಧರ ಗೆಲುವಿನಲ್ಲಿ ಜಗತ್ತಿನ ಶಾಂತಿಯ ಉಳಿವಿನ ಪ್ರಶ್ನೆ ಕೂಡ ಅಡಗಿದೆ. [ವಿವಿಧ ಮೂಲಗಳಿಂದ]

○

——ಹಸಿದ ಕಣ್ಗಳಿಂದ——

ಹಸಿದ ಒಡಲಿಗೆ ಹೊಸ ಕಾವ್ಯ

ನಮ್ಮ ಕಾವ್ಯ, ನಮ್ಮ ಸಾಹಿತ್ಯ ಹಸಿದವರಿಗಾಗಿ ಏನು ಮಾಡುತ್ತಿದೆ? ಈ ಪ್ರಶ್ನೆ ಸಾಹಿತ್ಯದ ಇತಿಹಾಸದ ಉದ್ದಕ್ಕೂ ಬೆಳೆಯುತ್ತಲೇ ಬರುತ್ತಿದೆ.

ಸಾಹಿತ್ಯ ವ್ಯಕ್ತಿ ಬೆಳವಣಿಗೆಗೆ, ಸಮಾಜ ಬೆಳವಣಿಗೆಗೆ, ಪರಿಸರ ಬೆಳವಣಿಗೆಗೆ ಸ್ಪಂದಿಸಬಹುದು. ಆದರೆ ಹಸಿದವರಿಗೆ ಅನ್ನವನ್ನು ಕೊಡಲಾರದು. ಹಸಿವೆ ಬಗ್ಗೆ ಹೋರಾಟಕ್ಕಿಳಿಸಬಹುದು.

ಆದರೆ ಈಗ ಇಂಡಿಯಾದಂಥ ದೇಶದಲ್ಲಿ ಕಾವ್ಯ ಏನಾಗುತ್ತಿದೆ? ಅನಕ್ಷರತೆ, ಮೂಢ ನಂಬಿಕೆ, ಬಡತನ ನಿರುದ್ಯೋಗ ಜಾಲದೊಳಗೆ ಇಡೀ ಶೋಷಿತ ಜನಾಂಗ ಸುತ್ತಿ ಸುತ್ತಿ ಸುಣ್ಣವಾಗುತ್ತಿರುವಾಗ ಕಾವ್ಯಕ್ಕೆ ಕಿವಿ ಕೊಡುವವರಾರು?

ಹಾಗಾಗಿ ನಮ್ಮ ಕಾವ್ಯ ಸಾಹಿತ್ಯಾಸಕ್ತರ, ಇಲ್ಲವೆ ಬುದ್ಧಿ ಜೀವಿಗಳ ನೆನಪಿನ ಲೋಕದಲ್ಲಿ ಉಳಿಯುವುದ್ದಕಷ್ಟೇ ಸೀಮಿತವಾಗುತ್ತಿದೆ.

ನಮಗೆ ಬೇಕು ಈಗ ನೋವಿಲ್ಲದ, ಹಸಿವಿಲ್ಲದ ಬದುಕು. ಈ ಬದುಕಿಗೆ ಸ್ಪಂದಿಸುವ ಕಾವ್ಯ ಶೋಷಿತರ ಧ್ವನಿಯಾಗಬೇಕು. ಇದು ಎಲ್ಲರು ಬಯಸುವುದು, ಎಲ್ಲರು ಒಪ್ಪುವ ಮಾತು. ಆದರೆ ಇಲ್ಲಿಯವರೆಗೆ ನಮ್ಮ ಕಾವ್ಯ ನಮಗೇನು ಮಾಡಿದೆ?

"ಸುಡುವ ಸೂರ್ಯ ಕಾವಿನಿಂದ ಮೈಯ ರಕ್ತವೆಲ್ಲ ಕತಕತನೆ ಕುದಿದು ಬರೆಯುವ ಪೆನ್ನಿಗೆ ಇಂಕಾಗುವಾಗ, ಇನ್ನೇಕೆ ಮರ, ಗಿಡ, ಹೂ, ಹೆಣ್ಣಿನ ಬಗ್ಗೆ ಬರೆಯಬೇಕು" ಎಂಬ ಕೆಲವರ ಪ್ರಶ್ನೆ ನಮ್ಮ ಮುಂದೆಯಿದ್ದಾಗ್ಯೂ, ಮತ್ತೆ ನಾವೇಕೆ ಕಾವ್ಯದ ಹಳೆ ಹಾದಿಯನ್ನು ತುಳಿಯುತ್ತಿದ್ದೇವೆ?

ಹಸಿದ ಒಡಲಿಗೆ ಹೋರಾಟ ಬೇಕು. ಹೋರಾಟದ ಬದುಕಿಗೆ ಹೊಸ ಕಾವ್ಯ ಬೇಕು. ಅಂದಾಗ ಮಾತ್ರ ನಮ್ಮ ನೋವು-ನಲಿವಿನ ಪರಿಸರದ ನಡುವೆ ಕಾವ್ಯ ಹೊಸ ಮೌಲ್ಯಪಡೆಯುವುದು.

ನಿರುದ್ಯೋಗದ ನೆಲೆ–ಬೆಲೆ?

ದಿನ ಬೆಳಗಾದರೆ ಪತ್ರಿಕೆಗಳ ಮುಖ ಪುಟಗಳಲ್ಲಿ ಪುಢಾರಿ ರಾಜಕಾರಣಿಗಳ ಮಾತುಗಳಲ್ಲಿ ನಾವು ಕೇಳುತ್ತಲೇ ಇದ್ದೇವೆ, ನೋಡುತ್ತಲೇ ಇದ್ದೇವೆ, ನಿರುದ್ಯೋಗದ ಬಗ್ಗೆ. ಈ ನಿರುದ್ಯೋಗದ ಸಮಸ್ಯೆ ಹತಾಶೆ ಯುವಕರ ಭವಿಷ್ಯದ ಚಿಂತೆಯಾದರೆ ಇನ್ನು ಕೆಲವು ರಾಜಕಾರಣಿಗಳಿಗೆ ನಿರುದ್ಯೋಗದ ಬಗ್ಗೆ ಗಂಟಿ ಗಟ್ಟಲೆ ಮಾತನಾಡುವ ಉದ್ಯೋಗವಾಗಿದೆ.

ದಿನ ಬೆಳಗಾದರೆ ದಿನಗಳನ್ನು ಎಣಿಸುತ್ತ ಬದುಕನ್ನು ಗುಣಿಸುತ್ತ ಪತ್ರಿಕೆಗಳಲ್ಲಿ ಕಾಣುವ "ಬೇಕಾಗಿದ್ದಾರೆ" ಎಂಬ ಜಾಹೀರಾತಿಗೆ ಮರುಳಾಗಿ ಕಚೇರಿ, ಕಾರಖಾನೆಗಳಿಗೆ ಅಲೆಯುವ ಜನಗಳಿಗೆ ಲೆಕ್ಕವಿಲ್ಲ.

ಇಂಡಿಯದಂತಹ ಪ್ರಗತಿಶೀಲ ರಾಷ್ಟ್ರದಲ್ಲಿ ಹಣ, ಜಾತಿ, ಶಿಫಾರಸ್ಸು ಪಡೆಯುವ ವ್ಯಕ್ತಿಗೆ ಮೊದಲ ಪ್ರಾಮುಖ್ಯತೆ ದೊರೆಯುತ್ತಿದ್ದರಿಂದ ಹಣವಿಲ್ಲದ, ಶಿಫಾರಸ್ಸು ಇಲ್ಲದ ಸಾವಿರಾರು ಯುವಕರು ಕೆಲಸವಿಲ್ಲದೆ ಬೀದಿಗೆ ಬರುತ್ತಿದ್ದಾರೆ. ನಿತ್ಯ ಬದುಕನ್ನು ಎದುರಿಸುವ ಇವರಿಗೆ ಈಗ ಕೆಲಸಬೇಕು. ಇಲ್ಲದಿದ್ದರೆ ಮುಂದೆ ಬರುವ "ನಾಳೆಗಳು" ನಮ್ಮದಾಗಿರುವುದಿಲ್ಲ ಎಂಬುವುದಕ್ಕೆ ಸಂಶಯವಿಲ್ಲ.

— ಕಲಾಲ್

ಅಕ್ಟೋಬರ್ ೪ - ಶಾಂತಿ ಯಾತ್ರೆ

(1ನೇ ಪುಟದಿಂದ)

ಪಾಕಿಸ್ತಾನ ಮತ್ತು ಶ್ರೀಲಂಕಾಗಳಲ್ಲಿ ಹೊಸ ನೆಲೆಗಳನ್ನು ಅದು ಮಾಡಿಕೊಂಡಿದೆ. ಪಾಕಿಸ್ತಾನವನ್ನು ತನ್ನ ಕಾರ್ಯಾಚರಣೆಯ ನೆಲೆಯನ್ನಾಗಿ ಪರಿವರ್ತಿಸಬಹುದೆಂದು ಅದು ಆಶಿಸಿಕೊಂಡಿದೆ. ಅದಕ್ಕಾಗಿ ಜೀಯಾ ಆಡಳಿತಕ್ಕೆ ಭಾರಿ ಪ್ರಮಾಣದಲ್ಲಿ ಅದು ಶಸ್ತ್ರಾಸ್ತ್ರವನ್ನು ಒದಗಿಸುತ್ತಿದೆ. ಹಾಗೂ ಪಾಕಿಸ್ತಾನವನ್ನು ಅಣುಅಸ್ತ್ರಶಕ್ತಿಯನ್ನಾಗಿ ಬೆಳೆಸಬಹುದೆಂಬ ಆಶಯವನ್ನು ಅದು ಇಟ್ಟುಕೊಂಡಿದೆ. ಅಮೇರಿಕಾದ ಬೆಂಬಲದಿಂದ ಲೆಬನಾನ್ ಮೇಲೆ ಇಸ್ರೇಯೇಲ್ ನಡೆಸಿದ ಆಕ್ರಮಣವು ಪ್ಯಾಲೆಸ್ತೀನ್ ವಿಮೋಚನಾ ಸಂಸ್ಥೆಯನ್ನು ನಾಶ ಮಾಡುವ ಉದ್ದೇಶದಿಂದ ಕೂಡಿದುದು. ಇದರಿಂದಾಗಿ ತಾನು ಶಾಂತಿಯನ್ನು ಬಯಸುವುದಾಗಿ ಹೇಳುತ್ತಿರುವ, ಪ್ಯಾಲೆಸ್ತೀನಿಯನರ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಹರಿಸಲು ಸಿದ್ಧವೆಂದು ನುಡಿಯುತ್ತಿರುವ ಅಮೇರಿಕಾದ ಹೇಳಿಕೆಯು ಎಷ್ಟು ವಂಚನೆಯದೆಂಬುದು ಬಟ್ಟಬಯಲಾಗಿದೆ. ಅಮೇರಿಕಾದ ನಿಜ ಉದ್ದೇಶವೆಂದರೆ ತಮ್ಮದೇ ಆದ ರಾಷ್ಟ್ರಬೇಕೆನ್ನುವ ಪ್ಯಾಲೆಸ್ತೀನಿಯರ ಹಕ್ಕನ್ನು ನಿರಾಕರಿಸುವುದು; ತೈಲ ಸಮೃದ್ಧವಾದ ಪಶ್ಚಿಮ ಏಷ್ಯಾದ ಪ್ರದೇಶವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವುದು; ಅದಕ್ಕಾಗಿ ಇಸ್ರೇಯೇಲಿ ಕುಲ ವಾದಿಗಳ ಸಹಾಯವನ್ನು ಪಡೆಯುವುದು. ಲೆಬನಾನ್‌ನ ಮೇಲೆ ಇಸ್ರೇಯೇಲ್ ಅಕ್ರಮಣಕಾರರು ನಡೆಸಿದ ಕ್ರೌರ್ಯ, ದೌರ್ಜನ್ಯಗಳು ಯುರೋಪಿನಲ್ಲಿ ಯಹೂದ್ಯರ ಮೇಲೆ ಹಿಟ್ಲರನು ನಡೆಸಿದ ಕ್ರೌರ್ಯಗಳನ್ನು ನೆನಪಿಗೆ ತರುತ್ತವೆ.

ಸೋವಿಯೆತ್ ಸೂಚನೆ

ಅಣು ಅಸ್ತ್ರ ಪೈಪೋಟಿಯನ್ನು ಶೀಘ್ರವಾಗಿ ಕೊನೆಗೊಳಿಸಲು ತನ್ಮೂಲಕ ಅವುಗಳ ಸಂಖ್ಯೆಗಳನ್ನು ಕಡಿಮೆ ಮಾಡಿ ಅವುಗಳನ್ನು ಕೊನೆಗೆ ಸಂಪೂರ್ಣವಾಗಿ ವರ್ಜಿಸಲು, ಸೋವಿಯತ್ ಯೂನಿಯನ್ ಅತ್ಯಂತ ನ್ಯಾಯವಾದ ಸೂಚನೆಗಳನ್ನು ಮುಂದಿಟ್ಟಿದೆ ತಾನಾಗಿ ಮೊದಲಿಗೆ ಅಣುಅಸ್ತ್ರಗಳ ಉಪಯೋಗ ಮಾಡಲಾರೆ ಎಂದು ವಿಶ್ವಸಂಸ್ಥೆಯ ವಿಶೇಷ ಅಧಿವೇಶನದಲ್ಲಿ ಸೋವಿಯೆತ್ ಯೂನಿಯನ್ ಮಾಡಿರುವ ಘೋಷಣೆಯು ರಾಜಕೀಯ ಅಭಿಪ್ರಾಯಗಳೇನೇ ಇರಲಿ, ಎಲ್ಲ ಶಾಂತಿಪ್ರಿಯರ ಹೃತ್ಪೂರ್ವಕ ಬೆಂಬಲಕ್ಕೆ ಪಾತ್ರವಾಗಿದೆ. ಅಮೇರಿಕಾ ಮತ್ತು ಅಣುಅಸ್ತ್ರಗಳನ್ನು ಹೊಂದಿರುವ ಇತರ ರಾಷ್ಟ್ರಗಳು ಈ ಸೂಚನೆಗೆ ಅನುಕೂಲವಾದ ಪ್ರತಿಕ್ರಿಯೆಯನ್ನು ತೋರಿಸಿದ್ದೇ ಆದರೆ ಇದು ಅಣುಅಸ್ತ್ರಗಳ ನಿರಾಯುಧೀಕರಣದ ಪ್ರಥಮ ಹೆಜ್ಜೆಯಾಗಬಹುದು. ಆದರೆ ಅಮೇರಿಕಾದ ಅಧ್ಯಕ್ಷ ರೀಗನ್, ಸೋವಿಯೆತ್ ಯೂನಿಯನಿನ ಇತರ ಸೂಚನೆಗಳನ್ನು ನಿರಾಕರಿಸಿದ್ದೇ ಅಲ್ಲದೆ, ಅಣುಅಸ್ತ್ರಗಳನ್ನು ಮೊದಲಾಗಿ ಉಪಯೋಗಿಸಲಾರೆ ಎಂಬ ಸೂಚನೆಯನ್ನೂ ಸಿಡುಕಿನಿಂದ ತಿರಸ್ಕರಿಸಿದ್ದಾರೆ. ಇಷ್ಟೇ ಅಲ್ಲ ಇದಕ್ಕೆ ಬದಲಾಗಿ ಅಣುಅಸ್ತ್ರಗಳಲ್ಲಿ ಸೋವಿಯೆತ್ ಯೂನಿಯನಿಗಿಂತ ತಾನು ಶ್ರೇಷ್ಠತೆ ಪಡೆಯಲು ದಾರಿಮಾಡಿಕೊಡುವಂತಹ ಸೂಚನೆಗಳನ್ನು ಅವರು ಮುಂದಿಟ್ಟಿದ್ದಾರೆ. ಸೋವಿಯೆತ್ ಯೂನಿಯನಾದರೋ ಸಮಾನತೆ, ಸಮಾನ ರಕ್ಷಣೆಯ ತತ್ವಗಳಿಗೆ ಬದ್ಧವಾಗಿರುವ ರಾಷ್ಟ್ರ, ಆದುದರಿಂದ ರೇಗನ್‌ರ ಅಸಂಬದ್ಧ ಸೂಚನೆಗಳನ್ನು ಅದು ಒಪ್ಪಲಾರದು.

ಶಾಂತಿ ಚಳವಳಿ

ಮಾನವಕೋಟಿಯನ್ನು ಇದಿರಿಸುತ್ತಿರುವ ಅಣುಯುದ್ಧದ ದುರಂತದ ಕಾರ್ಮೋಡಗಳ ನಡುವೆ ಕಾಣುತ್ತಿರುವ ರಜತರೇಖೆಯೊಂದೆಂದರೆ ಜಗತ್ತಿನ ಜನಕೀಯ ಶಕ್ತಿಗಳು ಈ ಅಪಾಯದ ಅರಿವನ್ನು ಹೊಂದಿರುವುದು ; ಅದರ ವಿರುದ್ಧ ತಾವು ಅಣಿಯಾಗಿರುವುದು. ಲಂಡನ್, ಪ್ಯಾರಿಸ್, ಬಾನ್, ರೋಮ್ ಬ್ರುಸೆಲ್ಸ್, ಹೆಲ್ಸಿಂಕಿ ಮೊದಲಾದ ಕಡೆಗಳಲ್ಲಿ ನಡೆದ ಬೃಹತ್ ಮತಪ್ರದರ್ಶನಗಳು; ಮಹಿಳೆಯರ ಶಾಂತಿ ಯಾತ್ರೆಗಳು; ಯುದ್ಧ ಪ್ರವೃತ್ತಿಯನ್ನು ವಿರೋಧಿಸುವ ದುಡಿಯುವ ವರ್ಗದ ಹೆಚ್ಚುತ್ತಿರುವ ದೃಢನಿರ್ಧಾರ; ಇವನ್ನು ಜಗತ್ತಿನಾದ್ಯಂತ ನಡೆಯುತ್ತಿರುವ ಮಹಾನ್ ಶಾಂತಿ ಚಳವಳಿಯ ಹಿನ್ನೆಲೆಯಲ್ಲಿ ನೋಡಿದರೆ ಆಕ್ರಮಣಗಾರರ ವಿರುದ್ಧ ತನ್ನ ಸಂಕಲ್ಪವನ್ನು ದೃಢಗೊಳಿಸಲು ಜನತೆಗೆ ಸಾಧ್ಯವಿದೆ ಎಂಬುದು ಕಾಣುತ್ತದೆ. ಶಸ್ತ್ರಾಸ್ತ್ರ ಪೈಪೋಟಿ, ಅಣು ಯುದ್ಧ ಇವುಗಳ ವಿರುದ್ಧ ಇತ್ತೀಚೆಗೆ ನ್ಯೂಯಾರ್ಕ್‌ನಲ್ಲಿ ನಡೆದ ಚಳವಳಿಯಲ್ಲಿ 10 ಲಕ್ಷ ಮಂದಿ ಭಾಗವಹಿಸಿದ್ದರು. ಇವರಲ್ಲಿ ವಿವಿಧ ವಿಭಾಗ ವರ್ಗಗಳಿಗೆ ಸೇರಿದ ಜನರಿದ್ದರು. ಯುದ್ಧದ ಕರಾಳ ಶಕ್ತಿಯ ವಿರುದ್ಧ ಹೆಚ್ಚುತ್ತಿರುವ ಜನಕೀಯ ಶಕ್ತಿಗಳ ಬಲವನ್ನಿದು ತೋರಿಸುತ್ತಿದೆ.

ಯುದ್ಧ ವಿರೋಧಿ ಪ್ರಣಾಳಿಕೆ

ಸಾಮ್ರಾಜ್ಯವಾದಿಗಳ ಯುದ್ಧ ನೀತಿಗಳನ್ನು ನಮ್ಮ ದೇಶವು ವಿರೋದಿಸುತ್ತಿರುವುದು, ಎಲ್ಲ ವೇದಿಕೆಗಳಲ್ಲೂ ಜಾಗತಿಕ ಶಾಂತಿಯ ಬೆಂಬಲಾರ್ಥವಾಗಿ ಸ್ವರವೆತ್ತಿರುವುದು ಸಂತೋಷಕರ ಸಂಗತಿ ಆದರೆ ಯುದ್ಧದ ಅಪಾಯವು ಇಡಿಯ ಮಾನವ ಕುಲವನ್ನೇ ಬೆದರಿಸುತ್ತಿರುವುದರಿಂದ ಈ ವಿಚಾರದಲ್ಲಿ ಇನ್ನೂ ಹೆಚ್ಚು ಕಾರ್ಯವೆಸಗುವ ಅಗತ್ಯವಿದೆ. ಅಣುಯುದ್ಧದ ಗಂಡಾಂತರವನ್ನು ತಪ್ಪಿಸಲು, ಸಾಮ್ರಾಜ್ಯವಾದಿಗಳ ಯೋಜನೆಗಳನ್ನು ಜನರ ಇದಿರು ಬಯಲಿಗೆಳೆಯಲು, ಸಾಮ್ರಾಜ್ಯವಾದಿ ವಿರೋಧಿ, ಶಾಂತಿಪರವಾದ ಎಲ್ಲ ಶಕ್ತಿಗಳನ್ನು ಅಣಿನೆರೆಸಿ ಅಣುಯುದ್ಧದ ಅಪಾಯವನ್ನು ಹೋಗಲಾಡಿಸಲು ಒಂದು ಶಕ್ತಿಯುತವಾದ ಪ್ರಕ್ಷೋಭೆಯನ್ನು ನಡೆಸಬೇಕಾಗಿದೆ ; ಅದಕ್ಕಾಗಿ ಎಲ್ಲ ದೇಶಪ್ರೇಮಿ ಶಕ್ತಿಗಳೂ ಒಂದಾಗಬೇಕಾಗಿದೆ.

ಈ ಗುರಿಯನ್ನು ಮುಂದಿಟ್ಟು ದೇಶದಲ್ಲಿ ಶಕ್ತಿಯುತವಾದ ಶಾಂತಿ ಚಳವಳಿಯನ್ನು ಸಂಘಟಿಸಲು ನಾವು ನಿರ್ಣಯಿಸಿದ್ದೇವೆ.

●

ಐಕ್ಯ ಹೋರಾಟಕ್ಕೆ ಕರೆ

(7ನೇ ಪುಟದಿಂದ)

ತೀವ್ರವಾಗಿ ಮೂಡಿಬಂದಿವೆ. ಬಂಡವಾಳಶಾಹಿ ಪರ ರಾಜಕೀಯ ಪಕ್ಷಗಳನ್ನು ತೊಲಗಿಸಿ ರೈತ-ಕಾರ್ಮಿಕರ ಪ್ರತಿನಿಧಿ ಪಕ್ಷಗಳು ಪ್ರಭುತ್ವಕ್ಕೆ ಬರದೆ ರೈತರ ಆರ್ಥಿಕ ಸಮಸ್ಯೆಗಳು, ಬೇಡಿಕೆಗಳು ಬಗೆಹರಿಯಲು ಸಾಧ್ಯವೇ ಇಲ್ಲ ಎನ್ನುವುದು— ರೈತ ಹೋರಾಟಕ್ಕೆ ರಾಜಕೀಯ ಗೊತ್ತುಗುರಿ ಅತ್ಯವಶ್ಯ ಎಂದು ಎತ್ತಿ ತೋರಿಸುತ್ತದೆ. "ರಾಜಕೀಯ ರಹಿತ" ಎನ್ನುವುದು,- ಆಳುವ ಶಕ್ತಿಗಳೊಂದಿಗೆ ಶಾಮೀಲಾಗಿರುವ ತಪ್ಪು ನೀತಿಯಾಗಿದೆ.

ಈಗ ರಾಜ್ಯ ರೈತರನ್ನು ಮತ್ತೊಮ್ಮೆ ದೊಡ್ಡ ಪ್ರಮಾಣದಲ್ಲಿ ಸುಸಂಘಟಿತ ಹೋರಾಟಕ್ಕಿಳಿಸಲು ಸರಕಾರಕ್ಕೆ ಅಂತಿಮ ಮಹಾಮನವಿ ಸಲ್ಲಿಸುವ ಕಾರ್ಯಕ್ರಮವನ್ನು ನಡೆಸಲಿದೆ. ಸರಕಾರಕ್ಕೆ ಸಲ್ಲಿಸಲಿರುವ ಬೇಡಿಕೆಗಳನ್ನೊಳಗೊಂಡ ಮಹಾಮನವಿಗೆ ರೈತರಿಂತ ಹತ್ತು ಲಕ್ಷ ಸಹಿ ಸಂಗ್ರಹಿಸುವ, ಆಗಸ್ಟ್ ಕೊನೆಯ ವಾರದಲ್ಲಿ 'ವಿಧಾನ ಸೌಧ ಚಲೋ' ಕಾರ್ಯಕ್ರಮ ಹೊಂದಿದೆ.

ರಾಜ್ಯದ ರೈತರ ಪ್ರತಿನಿಧಿಕ ಸಾರ್ವತ್ರಿಕ ಸಮಸ್ಯೆಗಳನ್ನು ಹೆಚ್ಚು ಅಧಿಕೃತವಾಗಿ ಗುರುತಿಸಿಕೊಂಡು ಸಮಸ್ತ ರೈತಾಪಿ ವರ್ಗದ ಬೇಡಿಕೆಗಳ ಕುರಿತು ಸರಕಾರ ಗಮನಹರಿಸುವಂತೆ ಮಾಡಲು ಐಕ್ಯ ಹೋರಾಟಕ್ಕೆ ರೈತರನ್ನು ಇಳಿಸಲು ಪ್ರಾಂತ ರೈತ ಸಂಘ ತೀರ್ಮಾನಿಸಿದೆ.

ರಾಜ್ಯದ ಎಲ್ಲ ರೈತ ಸಂಘಟನೆಗಳು ಐಕ್ಯ ರೀತಿಯಲ್ಲಿ ಒಂದಾಗಿ ಸಮನ್ವಯ ಸಮಿತಿ ರೂಪಿಸಿಕೊಂಡು ರಾಜ್ಯಾದ್ಯಂತ ತೀವ್ರ ವಿಶಾಲ ಐಕ್ಯ ಹೋರಾಟ ನಡೆಸಲು ಮುಂದಾಗಬೇಕೆಂದು, ಈ ಮೂಲಕ ಕರ್ನಾಟಕ ಪ್ರಾಂತ ರೈತ ಸಂಘ ಇತರ ಸಂಘಟನೆಗಳಿಗೆ ಕರೆ ನೀಡಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ೧೩ ಸಾವು !

(1ನೇ ಪುಟದಿಂದ)

ಮಂಗಳೂರು—ಮೈಸೂರು ಹಾಗೂ ಮಂಗಳೂರು—ಕಾಸರಗೋಡು ರಸ್ತೆಯ ಸಂಪರ್ಕ ಕಡಿದು ಒಂದೆರಡು ದಿವಸ ಸಾರಿಗೆ ವ್ಯವಸ್ಥೆ ಸಂಪೂರ್ಣ ನಿಂತಿದೆ.

ಈ ಸಂದರ್ಭದಲ್ಲಿ ಎಲ್ಲಾ ಪ್ರದೇಶಗಳಲ್ಲೂ ಕಷ್ಟಕ್ಕೊಳಗಾದ ಸಾವಿರಾರು ಜನರನ್ನು ಸುರಕ್ಷಿತವಾದ ಪ್ರದೇಶಗಳಿಗೆ ಸಾಗಿಸುವುದರಲ್ಲೂ, ಅವರ ಸೊತ್ತುಗಳನ್ನು ರಕ್ಷಿಸುವುದರಲ್ಲೂ ನೆರವಾದ ಎಲ್ಲಾ ವಿಭಾಗದ ಜನರನ್ನು ಅಭಿನಂದಿಸಲೇಬೇಕಾಗಿದೆ.

ತುರ್ತು ಪರಿಹಾರಕ್ಕೆ ಒತ್ತಾಯ

ಭೀಕರ ನೆರೆಯಿಂದ ಭಾರಿ ಕಷ್ಟ-ನಷ್ಟಗಳಿಗೆ ಒಳಗಾದ ನೆರೆ ಸಂತ್ರಸ್ತರಿಗೆ ತುರ್ತು ಪರಿಹಾರ ನೀಡಿ ಪುನರ್ನಿವೇಶನದ ವ್ಯವಸ್ಥೆ ಮಾಡಬೇಕೆಂದು ದಕ್ಷಿಣ ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾಮ್ರೇಡ್ ಅಬ್ರಹಾಂ ಕರ್ಕಡ ಹಾಗೂ ದ. ಕ. ಜಿಲ್ಲಾ ಸಿ.ಐ.ಟಿ.ಯು.ವಿನ ಕಾರ್ಯದರ್ಶಿಯವರಾದ ಕಾಮ್ರೇಡ್ ಕೆ ಶಂಕರ್‌ನವರು ಸರಕಾರವನ್ನು ಒತ್ತಾಯಿಸಿರುತ್ತಾರೆ. ನೆರೆ ಸಂತ್ರಸ್ತರಿಗೆ ಯಾವ ರೀತಿಯಲ್ಲೂ ವಂಚನೆಯಾಗದಂತೆ ಪರಿಹಾರ ನೀಡಲು ಎಲ್ಲಾ ವಿಭಾಗದ ಜನರ ಪ್ರತಿನಿಧಿಗಳನ್ನು ಸೇರಿಸಿ "ನೆರೆ ಪರಿಹಾರ ಸಮಿತಿ" ಯೊಂದನ್ನು ರಚಿಸುವಂತೆ ಸಲಹೆ ನೀಡಿರುತ್ತಾರೆ.

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಕುಂದಾಪುರ ತಾಲ್ಲೂಕು ಸಮಿತಿಯು ಕಷ್ಟ-ನಷ್ಟಕ್ಕೆ ಒಳಗಾದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸುವುದರಲ್ಲೂ, ಅವರ ಸೊತ್ತುಗಳನ್ನು ರಕ್ಷಿಸುವುದರಲ್ಲೂ ನೆರವಾದ ಪಕ್ಷದ ಸದಸ್ಯರನ್ನೂ ಹಾಗೂ ಕಾರ್ಮಿಕರನ್ನು ಅಭಿನಂದಿಸಿದೆ. ಮುಂದೆ ಕೂಡಾ ಎಲ್ಲಾ ರೀತಿಯಲ್ಲಿ ಸಹಕಾರ ನೀಡವಂತೆ ಸ್ವಯಂ ಸೇವಕರಾಗಿ ದುಡಿಯಲು ಮುಂದೆ ಬರುವಂತೆ ಕರೆ ನೀಡಿದೆ.

ಸಂಪಾದಕೀಯ

(1ನೇ ಪುಟದಿಂದ)

ರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ಹೇಳುವುದಿದ್ದರೆ ಸಿ. ಪಿ. ಐ. (ಎಂ)ನ ದೃಷ್ಟಿಯಲ್ಲಿ ಸಧ್ಯದ ಪರಿಸ್ಥಿತಿಯಲ್ಲಿ ಅತ್ಯಂತ ವಿಶಾಲ ತಳಹದಿಯ ಸರ್ವಾಧಿಕಾರ ವಿರೋಧ ಹೋರಾಟವೂ, ಎಡ ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟನ್ನು ಬೆಳೆಸಲು ನಡೆಸುವ ಹೋರಾಟವೂ ಆಗಬೇಕಿದೆ. ಈ ಎರಡು ಬೇರೆ ಬೇರೆ. ಆದರೆ ಇವೆರಡಕ್ಕೂ ಸಂಬಂಧವಿದೆ. ಸರ್ವಾಧಿಕಾರ ವಿರೋಧ ಹೋರಾಟವನ್ನು ಬಿಟ್ಟು ಎಡಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟು ಬೆಳೆಯಲಾರದು. ಜಂಟೀ ಹೇಳಿಕೆಯಲ್ಲಿ ಸರ್ವಾಧಿಕಾರ ವಿರುದ್ಧದ ಹೋರಾಟಕ್ಕೆ ಸಾಕಷ್ಟು ಒತ್ತು ಕೊಡದಿರುವುದರಿಂದ ಸಿ.ಪಿ.ಐ. (ಎಂ)ನ ನಿಲುವೆಯನ್ನು ತಪ್ಪಾಗಿ ತಿಳಿಯುವಂತಾಗುತ್ತದೆ.

ಎಡ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆಗಾಗಿ ಶ್ರಮಿಸಬೇಕೆಂದು ಹೇಳುತ್ತಾ "ಈ ಸಂಧರ್ಭದಲ್ಲಿ ರಾಜ್ಯದ ವಿಧಾನಸಭೆಯಲ್ಲಿ ರೂಪಿತವಾಗಿರುವ ಸಂಯುಕ್ತ ಪ್ರಜಾಪ್ರಭುತ್ವರಂಗ" ವನ್ನು ಸ್ವಾಗತಿಸುವುದು ಮತ್ತು ಅದರಲ್ಲಿ ಸಿ. ಪಿ. ಐ. (ಎಂ) ಅನ್ನೂ ಸೇರಿಸಿಕೊಳ್ಳಬೇಕೆಂದು ಹೇಳಿರುವುದು ಎಡ ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟಿನ ಬಗ್ಗೆ ಸಿ. ಪಿ. ಐ. (ಎಂ) ಗೆ ಇರುವ ತಿಳುವಳಿಕೆಗೆ ವ್ಯತಿರಿಕ್ತವಾಗುತ್ತದೆ. ಎಡ ಪ್ರಜಾ ಪ್ರಭುತ್ವರಂಗವೆಂದರೆ ಕಾರ್ಮಿಕ, ರೈತ ಮತ್ತು ಪ್ರಜಾಪ್ರಭುತ್ವ ಜನ ವಿಭಾಗದ ಕೂಟ ಎನ್ನುವುದಕ್ಕೆ ಬದಲು ಕೆಲವು ಪಕ್ಷಗಳು ರಚಿಸಿಕೊಂಡಿರುವ ಕೂಟ ಎಂಬ ಅಭಿಪ್ರಾಯವನ್ನು ಕೊಡುತ್ತದೆ. ಸಿ. ಪಿ. ಐ. (ಎಂ) ನ ದೃಷ್ಟಿಯಲ್ಲಿ ಕೇರಳದಲ್ಲಿರುವ ಎಡ ಪ್ರಜಾಪ್ರಭುತ್ವ ರಂಗವು, ಅದೊಂದು ಸಂಯುಕ್ತರಂಗವೇ ಹೊರತು ನಿಜವಾದ ಅರ್ಥದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳ ಕೂಟವಲ್ಲ. ಸಂಯುಕ್ತರಂಗ ಮತ್ತು ಕಾರ್ಯಾಚರಣೆಯ ವಿಧಾನಗಳಿಂದ ಎಡ ಪ್ರಜಾಪ್ರಭುತ್ವ ಶಕ್ತಿಗಳ ಒಗ್ಗಟ್ಟು ಬೆಳೆಯುವುದೆಂದು ಸಿ. ಪಿ ಐ. (ಎಂ) ನಂಬುತ್ತದೆ. ಜಂಟೀ ಅಧಿವೇಶನದಲ್ಲಿ ಅಂಗೀಕರಿಸಲಾದ ನಿರ್ಣಯದಲ್ಲಿ ಸಿ. ಪಿ. ಐ. (ಎಂ) ನಿಲುವೆಗಳ ಬಗ್ಗೆ ತಪ್ಪಾದ ಅಭಿಪ್ರಾಯ ಬರುವಂತಿದೆ

ಈ ಕಾರಣಗಳಿಂದ ಜಂಟೀ ಹೇಳಿಕೆಯಿಂದ ಸಿ. ಪಿ. ಐ (ಎಂ) ತನ್ನನ್ನು ಪ್ರತ್ಯೇಕಿಸಿಕೊಂಡಿದೆ. ಆದರೆ ರಾಜ್ಯದಲ್ಲಿ ಸಂಯುಕ್ತ ಕಾರ್ಯಾಚರಣೆಯನ್ನು ನಡೆಸಲು ಅಧಿವೇಶನದಲ್ಲಿ ತೆಗೆದುಕೊಂಡ ನಿರ್ಣಯದ ಆಧಾರದಲ್ಲಿ ಜಂಟೀ ಹೋರಾಟಗಳನ್ನೂ ನಡೆಸಲು ಮುಂದಾಗಿದೆ. ಸಂಯುಕ್ತ ಕಾರ್ಯಾಚರಣೆ ಮತ್ತು ಜಂಟೀ ಹೋರಾಟಗಳನ್ನು ಬೆಳೆಸುವುದೇ ಸಮಾವೇಶದ ಉದ್ದೇಶವಾಗಿತ್ತು. ಈ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಹಾಕಲು ಎರಡೂ ಪಕ್ಷಗಳು ಮುಂದಾಗುವುವೆಂದು ಆಶಿಸೋಣ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.